Bruhat Bengaluru
Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣುಕು

## 08-12-2020



# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ವಿಶ್ವ ವಾಣಿ
6. ಉದಯ ವಾಣಿ
7. ಸಂಯುಕ್ರ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಜಯಕಿರಣ
11. ಸಂಜೆ ವಾಣಿ
12. ಈ ಸಂಜೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 08-12-2020 |
|---|---|
| Page No | 2 |

### ಬಿಬಿಎಂಪಿ ಮಸೂದೆ 2020ಕ್ಕೆ ಆಯ್ಕೆ ಸಮಿತಿ ಅನುಮೋದನೆ

# ನ್ಯಾಯಾಂಗ– ಶಾಸಕಾಂಗ ಸಂಘರ್ಷಕ್ಕೆ ದಾರಿ?

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಬಿಎಂಪಿ ಚುನಾವಣೆಗೆ ಆರು ವಾರಗಳ ಒಳಗೆ ಅಧಿಸೂಚನೆ ಹೊರಡಿಸಬೇಕು ಎಂದು ಹೈಕೋರ್ಟ್ ಇತ್ತೀಚೆಗೆ ಆದೇಶ ಮಾಡಿರುವ ಬೆನ್ನಲ್ಲೇ ವಿಧಾನ ಮಂಡಲಗಳ ಜಂಟಿ ಸಲಹಾ ಸಮಿತಿಯು 'ಬಿಬಿಎಂಪಿ ಮಸೂದೆ 2020'ಗೆ ಅನುಮೋದನೆ ನೀಡಿದೆ.

ಬಿಬಿಎಂಪಿಯ ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ಹೆಚ್ಚಿಸುವುದು, ಮೇಯರ್ ಅಧಿಕಾರಾವಧಿಯನ್ನು ಎರಡೂವರೆ ವರ್ಷಗಳಿಗೆ ಹೆಚ್ಚಿಸುವುದೂ ಸೇರಿದಂತೆ ಅನೇಕ ಪ್ರಮುಖ ಅಂಶಗಳನ್ನು ಒಳಗೊಂಡಿರುವ ಈ ಮಸೂದೆಯನ್ನು ಈಗ ನಡೆಯುತ್ತಿರುವ ವಿಧಾನಮಂಡಲದ ಅಧಿವೇಶನದಲ್ಲೇ ಅಂಗೀಕರಿಸಲು ಸರ್ಕಾರ ಇನ್ನಿಲ್ಲದ ತಯಾರಿ ನಡೆಸಿದೆ.

ಶಾಸಕ ಎಸ್.ರಘು ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಜಂಟಿ ಸಲಹಾ ಸಮಿತಿಯ ಸಭೆಯಲ್ಲಿ ಬಿಬಿಎಂಪಿ ಮಸೂದೆಗೆ ಅನುಮೋದನೆ ನೀಡಲಾಗಿದೆ. ಅದನ್ನು ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವ ಜೆ.ಸಿ. ಮಾಧುಸ್ವಾಮಿ ಅಧ್ಯಕ್ಷತೆಯ ಪರಿಶೀಲನಾ ಸಮಿತಿ ಇನ್ನೊಮ್ಮೆ ಪರಿಶೀಲಿಸಿ ಒಪ್ಪಿಗೆ ಸೂಚಿಸಿದ ಬಳಿಕ ಈ ಮಸೂದೆ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನಲ್ಲಿ ಮಂಡನೆ ಆಗಲಿದೆ.

ಸರ್ಕಾರ ಹೈಕೋರ್ಟ್ ಆದೇಶವನ್ನು ಪಾಲಿಸುವ ಬದಲು ಚುನಾವಣೆ ಮುಂದೂಡಲು ಇಂತಹ ತಂತ್ರ ನಡೆಸುವುದು ಶಾಸಕಾಂಗ ಮತ್ತು ನ್ಯಾಯಾಂಗದ ನಡುವೆ ತಿಕ್ಕಾಟಕ್ಕೆ ಕಾರಣವಾಗಲಿದೆ ಎನ್ನುತ್ತಾರೆ ತಜ್ಞರು.

'ಈ ಮಸೂದೆಗೆ ಅಂಗೀಕಾರ ಪಡೆದು ಅದನ್ನೇ ಮುಂದಿಟ್ಟುಕೊಂಡು ಬಿಬಿಎಂಪಿ ಚುನಾವಣೆಯನ್ನು ಇನ್ನಷ್ಟು ಮುಂದೂಡುವ ಹುನ್ನಾರ ಸರ್ಕಾರದ್ದು. ಆದರೆ, ಸಂವಿಧಾನದ 74ನೇ ತಿದ್ದುಪಡಿ ಬಳಿಕ ನಗರ ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳ ಅವಧಿ ಮುಗಿಯುವುದರೊಳಗೆ ಚುನಾವಣೆ ನಡೆಸುವುದು ಕಡ್ಡಾಯ. ಅನಿವಾರ್ಯ ಕಾರಣಗಳಿಗಾಗಿ ಚುನಾವಣೆ ಮುಂದೂಡಿ ಆಡಳಿತಾಧಿಕಾರಿಯನ್ನು ನೇಮಿಸಿದರೂ ಆರು ತಿಂಗಳ ಒಳಗೆ ಚುನಾವಣೆ ನಡೆಸಲೇಬೇಕು. ಈ ಹಿಂದೆ ಬಿಬಿಎಂಪಿ ಚುನಾವಣೆಗಳನ್ನು ಮುಂದೂಡುವ ಪ್ರಯತ್ನಗಳು ನಡೆದಾಗಲೆಲ್ಲ ನ್ಯಾಯಾಲಯ ಇದೇ ಅಂಶ ಮುಂದಿಟ್ಟುಕೊಂಡು ಅದಕ್ಕೆ ಕಡಿವಾಣ ಹಾಕಿತ್ತು. 2015ರಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರವಿದ್ದಾಗಲೂ ಚುನಾವಣೆ ಮುಂದೂಡಲು ಬಿಬಿಎಂಪಿಯನ್ನು ಮೂರು ವಿಭಜನೆ ಮಾಡಲು ಮಸೂದೆ ಮಂಡಿಸಿ ಅಂಗೀಕರಿಸುವ ಪ್ರಯತ್ನ ನಡೆದಿತ್ತು. ಆದರೆ, ಅದಕ್ಕೆ ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್‌ಗಳು ಸೊಪ್ಪು ಹಾಕಿರಲಿಲ್ಲ' ಎಂದು ಪಾಲಿಕೆ ಸದಸ್ಯರಾಗಿದ್ದ ಬಿಜೆಪಿ ಮುಖಂಡರೊಬ್ಬರು ನೆನಪಿಸಿದರು.

'1976ರ ಕೆಎಂಸಿ ಕಾಯ್ದೆಯಲ್ಲಿರುವ ಅಂಶಗಳಿಗೆ ಸಣ್ಣಪುಟ್ಟ ಮಾರ್ಪಾಡು ಮಾಡಿ ಬಿಬಿಎಂಪಿ ಮಸೂದೆ ರೂಪಿಸಿದ್ದಾರೆ. ಈ ಬಗ್ಗೆ ಆಳವಾದ ಅಧ್ಯಯನ ನಡೆದಿಲ್ಲ. ಮಸೂದೆಯ ಕರಡನ್ನು ಸಾರ್ವಜನಿಕವಾಗಿ ಪ್ರಕಟಿಸಿ ಜನಾಭಿಪ್ರಾಯವನ್ನೂ ಪಡೆದಿಲ್ಲ. ಈಗಿರುವಂತೆಯೇ ಮಸೂದೆ ಅಂಗೀಕಾರಗೊಂಡಿದ್ದೇ ಆದರೆ, ಅದರಿಂದ ಅನೇಕ ಸಮಸ್ಯೆಗಳು ಉದ್ಭವಿಸಲಿವೆ' ಎಂದು ಬಿಬಿಎಂಪಿ ಸದಸ್ಯರಾಗಿದ್ದ ಇನ್ನೊಬ್ಬರು ಆತಂಕ ವ್ಯಕ್ತಪಡಿಸಿದರು.

'ಬಿಬಿಎಂಪಿ ವ್ಯಾಪ್ತಿಯಲ್ಲಿ ಆಸ್ತಿಗಳು, ತೆರಿಗೆ, ಕಟ್ಟಡ ನಿರ್ಮಾಣ ಉಪವಿಧಿಗಳಿಗೆ ಸಂಬಂಧಿಸಿದ ನಿಯಮ ಉಲ್ಲಂಘನೆಗೆ ಸಂಬಂಧಿಸಿ ಸಾವಿರಾರು ಪ್ರಕರಣಗಳು ನ್ಯಾಯಾಲಯದಲ್ಲಿವೆ. ಅವುಗಳನ್ನು ಇತ್ಯರ್ಥಪಡಿಸುವುದಕ್ಕೆ ಸಂಬಂಧಿಸಿ ಕೆಲವು ಗೊಂದಲಗಳು ಎದುರಾಗಬಹುದು. ಇಂತಹ ಸೂಕ್ಷ್ಮ ವಿಚಾರಗಳ ಬಗ್ಗೆ ಸಾರ್ವಜನಿಕವಾಗಿಯೂ ಆಳವಾದ ಚರ್ಚೆ ನಡೆಸುವ ಅಗತ್ಯವಿತ್ತು' ಎಂದು ಅವರು ಅಭಿಪ್ರಾಯಪಟ್ಟರು.

'ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ನಿಗದಿಪಡಿಸುವುದೂ ಸೇರಿದಂತೆ ಅನೇಕ ಬದಲಾವಣೆಗಳಿಗೆ ವೈಜ್ಞಾನಿಕ ಅಧ್ಯಯನ ಆಧಾರಗಳಿಲ್ಲ. ಈ ಮಸೂದೆ ಬಗ್ಗೆ ಬಿಬಿಎಂಪಿ ಕೌನ್ಸಿಲ್ ಸಭೆಯಲ್ಲೂ ಚರ್ಚೆಗೆ ಅವಕಾಶ ಮಾಡಿಕೊಟ್ಟು ಇದನ್ನು ಪ್ರಜಾಸತ್ತಾತ್ಮಕವಾಗಿ ರೂಪಿಸಿದ್ದರೆ ಅರ್ಥವಿರುತ್ತಿತ್ತು' ಎಂದರು.

ಬಿಬಿಎಂಪಿ ಚುನಾಯಿತ ಕೌನ್ಸಿಲ್ ಅವಧಿ 2020ರ ಸೆ.10ಕ್ಕೆ ಮುಕ್ತಾಯವಾಗಿತ್ತು. ಬಳಿಕ ಐಎಎಸ್ ಅಧಿಕಾರಿ ಗೌರವ್ ಗುಪ್ತ ಅವರನ್ನು ಬಿಬಿಎಂಪಿ ಆಡಳಿತಾಧಿಕಾರಿಯಾಗಿ ಸರ್ಕಾರ ನೇಮಿಸಿತ್ತು. ಬಿಬಿಎಂಪಿಯಲ್ಲಿ ಕಾಂಗ್ರೆಸ್– ಜೆಡಿಎಸ್ ಮೈತ್ರಿ ಆಡಳಿತವಿದ್ದಾಗ ಆಡಳಿತ ಪಕ್ಷದ ನಾಯಕರಾಗಿದ್ದ ಶಿವರಾಜು ಹಾಗೂ ಅಬ್ದುಲ್ ವಾಜಿದ್ ಅವರು ಬಿಬಿಎಂಪಿ ಚುನಾವಣೆ ಮುಂದೂಡುವುದನ್ನು ಪ್ರಶ್ನಿಸಿ ಹೈಕೋರ್ಟ್ ಮೊರೆ ಹೋಗಿದ್ದರು.

## 'ಚುನಾವಣೆ ಮುಂದೂಡುವ ಪ್ರಯತ್ನ ಫಲಿಸದು'

'ಬಿಬಿಎಂಪಿ ಚುನಾವಣೆ ಮುಂದೂಡುವ ಪ್ರಯತ್ನಕ್ಕೆ ಹೈಕೋರ್ಟ್ ಈಗಾಗಲೇ ತಡೆ ನೀಡಿದೆ. ಆರು ವಾರಗಳ ಒಳಗೆ ಚುನಾವಣೆಗೆ ಅಧಿಸೂಚನೆ ಹೊರಡಿಸುವುದು ಕಡ್ಡಾಯ ಎಂದು ಸ್ಪಷ್ಟವಾಗಿ ಹೇಳಿದೆ. ಮಸೂದೆ ಮಂಡಿಸಿ ಚುನಾವಣೆ ಮುಂದೂಡುವ ಹುನ್ನಾರ ನಡೆಸಿದರೆ ಅದನ್ನು ನ್ಯಾಯಾಲಯ ಮಾನ್ಯ ಮಾಡದು ಎಂಬ ವಿಶ್ವಾಸವಿದೆ' ಎಂದು ಕಾಂಗ್ರೆಸ್ ಮುಖಂಡ ಎಂ.ಶಿವರಾಜು ಹೇಳಿದರು.

ಕನ್ನಡಪ್ರಭ

| Date | 08-12-2020 |
|---|---|
| Page No | 2 |

# ನಗರದಲ್ಲಿ ಮತ್ತೆ ಮಳೆ, ಚಳಿಗಾಳಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬೆಂಗಳೂರಿನಲ್ಲಿ ಸೋಮವಾರ ಮೋಡ ಮುಸುಕಿದ ಹಾಗೂ ಚಳಿ ವಾತಾವರಣ ಕಂಡು ಬಂದಿದ್ದು, ಸಂಜೆ ಹೊತ್ತಿಗೆ ಹಲವು ಪ್ರದೇಶಗಳಲ್ಲಿ ಹಗುರದಿಂದ ಸಾಧಾರಣ ಮಳೆ ಬಿದ್ದಿದೆ.

ಬಂಗಾಳಕೊಲ್ಲಿಯಲ್ಲಿನ ಹವಾಮಾನ ಬದಲಾವಣೆಯಿಂದ ರಾಜಧಾನಿಯಲ್ಲಿ ಅಧಿಕ ಚಳಿ ವಾತಾವರಣ ಸೃಷ್ಟಿಯಾಗಿದೆ. ಸೋಮವಾರ ಬೆಳಗ್ಗೆಯಿಂದ ಮೋಡ ಕವಿದ ವಾತಾವರಣದ ಜೊತೆಗೆ ಆಗಾಗ ಬಿಸಿಲು ಸಹ ಕಂಡು ಬಂದಿದ್ದು, ಅಲ್ಲಲ್ಲಿ ತುಂತುರು ಮಳೆ ಸುರಿಯಿತು. ಸಂಜೆ 6 ಗಂಟೆ ನಂತರ ಜಯನಗರ, ಜೆ.ಪಿ.ನಗರ, ಸ್ಯಾಟ್‌ಲೈಟ್, ವಿಜಯನಗರ, ರಾಜಾಜಿನಗರ, ಮೆಜೆಸ್ಟಿಕ್, ಶೇಷಾದ್ರಿಪುರಂ, ಮಲ್ಲೇಶ್ವರಂ, ಯಲಹಂಕ, ಹೆಬ್ಬಾಳ ಸೇರಿದಂತೆ ಇತರ ಕಡೆಗಳಲ್ಲಿ ಜೋರು ಮಳೆ ಸುರಿಯಿತು.

ನಗರದಲ್ಲಿ ಡಿ.9ರ ವರೆಗೂ ಇದೇ ರೀತಿ ಚಳಿ, ಮೋಡ ಕವಿದ ಹಾಗೂ ಬೆಳಗ್ಗೆ ಮಂಜು ಕವಿದ ವಾತವರಣ ಇರಲಿದೆ. ನಿತ್ಯ ಅಂದಾಜು ಗರಿಷ್ಠ 24 ಹಾಗು ಕನಿಷ್ಠ 18 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಬಹುದು ಎಂದು ಕೆಎಸ್ಎನ್‌ಡಿಎಂಸಿ ಮಾಹಿತಿ ನೀಡಿದೆ.

ಕನ್ನಡಪ್ರಭ

| Date | 08-12-2020 |
|---|---|
| Page No | 2 |

# ನಗರದಲ್ಲಿ ನಿನ್ನೆ 861 ಮಂದಿ ಗುಣಮುಖ

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಸೋಮವಾರ 501 ಹೊಸ ಕೊರೋನಾ ಸೋಂಕು ಪ್ರಕರಣ ಪತ್ತೆಯಾಗಿದ್ದು, 861 ಮಂದಿ ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ. ಏಳು ಮಂದಿ ಮೃತಪಟ್ಟ ವರದಿಯಾಗಿದೆ. ಈ ಮೂಲಕ ನಗರದ ಒಟ್ಟು ಸೋಂಕಿತರ ಸಂಖ್ಯೆ 3,74,525ಕ್ಕೆ ಏರಿಕೆಯಾಗಿದ್ದು, ಗುಣಮುಖರ ಸಂಖ್ಯೆ 3,51,065ಕ್ಕೆ ತಲುಪಿದೆ. ನಗರದಲ್ಲಿ ಇನ್ನೂ 19,263 ಸಕ್ರಿಯ ಪ್ರಕರಣಗಳಿದ್ದು, ಈ ಪೈಕಿ 133 ಸೋಂಕಿತರ ಆರೋಗ್ಯ ಪರಿಸ್ಥಿತಿ ಗಂಭೀರವಾಗಿರುವ ಹಿನ್ನೆಲೆಯಲ್ಲಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಸೋಮವಾರ ನಗರದಲ್ಲಿ ಏಳು ಸೋಂಕಿತರು ಮೃತಪಟ್ಟ ವರದಿಯಾಗಿದ್ದು, ಒಟ್ಟು ಮೃತರ ಸಂಖ್ಯೆ 4,190 ಏರಿಕೆಯಾಗಿದೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ.

ಕನ್ನಡಪ್ರಭ

| Date | 08-12-2020 |
| --- | --- |
| Page No | 2 |

# ಬಿಬಿಎಂಪಿ ಚುನಾವಣೆಗೆ ಹೈ ಆದೇಶ ಪ್ರಶ್ನಿಸಿ ಸುಪ್ರೀಂಗೆ

## ಸುಪ್ರೀಂ ಮೊರೆಗೆ ಪಕ್ಷದ ಸಮ್ಮತವಿದೆ: ಮಾಧುಸ್ವಾಮಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬಿಬಿಎಂಪಿ ಚುನಾವಣೆ ನಡೆಸುವಂತೆ ಹೈಕೋರ್ಟ್ ನೀಡಿರುವ ಆದೇಶವನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್ ಮೆಟ್ಟಿಲೇರಲಾಗುವುದೆಂದು ಕಾನೂನು ಸಚಿವ ಜೆ. ಮಾಧುಸ್ವಾಮಿ ಹೇಳಿದ್ದಾರೆ.



ಸೋಮವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಸರ್ಕಾರಕ್ಕೂ ಕೂಡ ಬಿಬಿಎಂಪಿ ಚುನಾವಣೆ ಮಾಡಬೇಕು ಎಂಬ ಇರಾದೆ ಇದೆ. ಮುಂಚಿತವಾಗಿಯೇ ವಾರ್ಡ್‌ಗಳ ಮರು ವಿಂಗಡಣೆ ಮಾಡಲಾಗಿದೆ. 243 ವಾರ್ಡ್ ಪುನರ್ ವಿಂಗಡಣೆ ಮಾಡಿದ ಬಳಿಕ ಚುನಾವಣೆ ನಡೆಸಲು ಸಭೆಯಲ್ಲಿ ತೀರ್ಮಾನ ಮಾಡಲಾಗಿದೆ. ಹೀಗಾಗಿ 198 ವಾರ್ಡ್‌ಗಳಿಗೆ ಚುನಾವಣೆ ನಡೆಸಲು ಆಗುವುದಿಲ್ಲ. ಹೀಗಾಗಿ ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುತ್ತೇವೆ ಎಂದು ತಿಳಿಸಿದರು. 2021ರಲ್ಲಿ ಹೊಸ ಜನಗಣತಿ ನಡೆದರೆ ಜನಸಂಖ್ಯೆಯಲ್ಲಿ ಹೆ ಳವಾಗುತ್ತದೆ. ಜನಸಂಖ್ಯೆ ಆಧಾರದ ಮೇಲೆ ಮತ್ತಷ್ಟು ವಿಳಂಬ ಆಗಬಹುದು. ಹಾಗಾಗಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗುವುದು. ಇದಕ್ಕೆ ಎಲ್ಲಾ ಪಕ್ಷದ ಒಪ್ಪಿಗೆ ಇದೆ ಎಂದಿದ್ದಾರೆ.

ಕನ್ನಡಪ್ರಭ

| Date | 08-12-2020 |
|---|---|
| Page No | 2 |

# ಮಾಸ್ಕ್: ಒಂದೇ ದಿನ ₹4 ಲಕ್ಷ ದಂಡ

## ಕೋವಿಡ್ ನಿಯಮ ಮರೆತವರಿಗೆ ಮಾರ್ಷಲ್‌ಗಳಿಂದ ದಂಡದ ಬಿಸಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು



ನಗರದಲ್ಲಿ ಸೋಮವಾರ ಸಾಮಾಜಿಕ ಅಂತರ ಹಾಗೂ ಮಾಸ್ಕ್ ಧರಿಸಿದ 1,739 ಮಂದಿಯಿಂದ 4.34 ಲಕ್ಷ ರು. ದಂಡವನ್ನು ಬಿಬಿಎಂಪಿ ಮಾರ್ಷಲ್‌ಗಳು ವಸೂಲಿ ಮಾಡಿದ್ದಾರೆ.

ಬಿಬಿಎಂಪಿ ಮಾರ್ಷಲ್‌ಗಳು ಹೋಟೆಲ್, ಅಂಗಡಿ ಮುಂಗಟ್ಟು, ಕಲ್ಯಾಣ ಮಂಟಪ, ಸಾರ್ವಜನಿಕ ಕಾರ್ಯಕ್ರಮ ಸ್ಥಳದಲ್ಲಿ ಮಾಸ್ಕ್ ಧರಿಸದ ಮತ್ತು ವ್ಯಕ್ತಿಗತ ಅಂತರ ಪಾಲಿಸದವರನ್ನು ಪತ್ತೆ ಮಾಡಿ ದಂಡ ವಿಧಿಸಲು ತೀವ್ರ ತಪಾಸಣೆ ಕೈಗೊಂಡಿದ್ದಾರೆ. ಸೋಮವಾರ 1,698 ಮಾಸ್ಕ್ ಧರಿಸದ ಮತ್ತು 41 ಸಾಮಾಜಿಕ ಅಂತರ ಪಾಲಿಸದ ಪ್ರಕರಣಗಳಿಂದ 4,34,750 ರೂ. ದಂಡ ವಿಧಿಸಿದ್ದಾರೆ.

ಪೂರ್ವ ವಲಯದಲ್ಲಿ 461 ಮಂದಿಯಿಂದ 1,15,250 ರು, ಪಶ್ಚಿಮದಲ್ಲಿ 351 ಮಂದಿಯಿಂದ 87,750 ರು, ದಕ್ಷಿಣದಲ್ಲಿ 459 ಮಂದಿಯಿಂದ 1,14,750 ರು, ಮಹದೇವಪುರದಲ್ಲಿ 146 ಮಂದಿಯಿಂದ 36,500 ರು., ಆರ್.ಆರ್. ನಗರದಲ್ಲಿ 124 ಮಂದಿಯಿಂದ 31 ಸಾವಿರ ರು., ಯಲಹಂಕದಲ್ಲಿ 97 ಮಂದಿಯಿಂದ 24,250 ರು., ದಾಸರಹಳ್ಳಿಯಲ್ಲಿ 43 ಮಂದಿಯಿಂದ 10,750 ರು. ಹಾಗೂ ಬೊಮ್ಮನಹಳ್ಳಿ ವಲಯದಲ್ಲಿ 58 ಮಂದಿಯಿಂದ 14,500 ರು. ದಂಡ ವಸೂಲಿ ಮಾಡಲಾಗಿದೆ ಎಂದು ಬಿಬಿಎಂಪಿ ಮಾಹಿತಿ ನೀಡಿದೆ.

ಕನ್ನಡಪ್ರಭ

| Date | 08-12-2020 |
| --- | --- |
| Page No | 3 |


# ಬೀದಿ ಬಿಸಿನೆಸ್, ಆನ್‌ಲೈನ್ ಕ್ಲಾಸ್ ಬಂದ್

## ಕೃಷಿ ಕಾಯ್ದೆ ವಿರೋಧಿಸಿ ಇಂದು ಭಾರತ್ ಬಂದ್ | ಬೀದಿ ಬದಿ ವ್ಯಾಪಾರಿಗಳು ಹೊರತುಪಡಿಸಿ ಉಳಿದವರಿಂದ ನೈತಿಕ ಬೆಂಬಲ
## ಖಾಸಗಿ ಶಿಕ್ಷಣ ಸಂಸ್ಥೆಗಳಿಂದ ಆನ್‌ಲೈನ್ ಕ್ಲಾಸ್ ಸ್ಥಗಿತ | ಬಿಎಂಟಿಸಿ, ಮೆಟ್ರೋ ಸೇವೆ ಅಬಾಧಿತ | ಆಟೋ, ಟ್ಯಾಕ್ಸಿ ಎಂದಿನಂತೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳನ್ನು ವಿರೋಧಿಸಿ ರೈತಪರ ಸಂಘಟನೆಗಳು ಕರೆ ನೀಡಿರುವ ಭಾರತ್ ಬಂದ್‌ಗೆ ನಗರದ ಬೀದಿಬದಿ ವ್ಯಾಪಾರಿಗಳು ಪೂರ್ಣ ಬೆಂಬಲ ಘೋಷಿಸಿದ್ದರೆ, ಇನ್ನುಳಿದ ಬಹುತೇಕ ಸಂಘಟನೆಗಳು ಕೇವಲ ನೈತಿಕ ಬೆಂಬಲ ಘೋಷಿಸಿವೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಆನ್‌ಲೈನ್ ಕ್ಲಾಸ್‌ಗಳನ್ನು ಸ್ಥಗಿತಗೊಳಿಸಿ, ರೈತರ ಹೋರಾಟಕ್ಕೆ ಬೆಂಬಲ ನೀಡುವುದಾಗಿ ತಿಳಿಸಿದ್ದು, ಈ ಹಿನ್ನೆಲೆಯಲ್ಲಿ ಕಾರ್ಯಕ್ರಮಗಳ ಹೊರತಾಗಿ ನಗರದ ಜನಜೀವನ ಎಂದಿನಂತೆಯೇ ಇರುವ ಸಾಧ್ಯತೆಗಳಿವೆ.

ನಗರದಲ್ಲಿ ಪ್ರಮುಖ ಸಾರಿಗೆಗಳಾದ ಬಿಎಂಟಿಸಿ ಮತ್ತು ನಮ್ಮ ಮೆಟ್ರೋ ರೈಲು ಸಂಚಾರ ಅಬಾಧಿತವಾಗಿರುತ್ತದೆ. ಕೆ.ಆರ್. ಮಾರುಕಟ್ಟೆ ವರ್ತಕರ ಸಂಘ, ಹೋಟೆಲ್ ಮಾಲೀಕರ ಸಂಘ, ಅಖಿಲ ಕರ್ನಾಟಕ ಪೆಟ್ರೋಲ್ ಡೀಲರ್ ಅಸೋಸಿಯೇಷನ್, ಬಾರ್ ಮತ್ತು ರೆಸ್ಟೋರೆಂಟ್ ನೈತಿಕ ಬೆಂಬಲ ಘೋಷಿಸಿವೆ. ಹೀಗಾಗಿ, ಹೋಟೆಲ್, ಬ್ಯಾಂಕಿಂಗ್ ಸೇವೆಗಳು, ಪೆಟ್ರೋಲ್ ಬಂಕ್ ಸೇವೆಗಳು ಲಭ್ಯವಾಗಲಿವೆ. ಟ್ಯಾಕ್ಸಿ ಮತ್ತು ಆಟೋ ಚಾಲಕರ ಸಂಘವು ವಾಹನಗಳನ್ನು ರಸ್ತೆಗಿಳಿಸುವ ಆಯ್ಕೆಯನ್ನು ಚಾಲಕರಿಗೆ ಬಿಡಲಾಗಿದೆ. ಕೆಲವು ಚಾಲಕರು ಬಂದ್‌ಗೆ ಸಂಪೂರ್ಣ ಬೆಂಬಲ ಘೋಷಿಸಿದ್ದು, ಮತ್ತೆ ಕೆಲವರು ನೈತಿಕ ಬೆಂಬಲ ಘೋಷಿಸಿದ್ದಾರೆ.

ಇದರಿಂದ ಆಟೋ, ಟ್ಯಾಕ್ಸಿ, ಬಸ್ ಸೇವೆಗಳು, ಮಾರುಕಟ್ಟೆ, ಖಾಸಗಿ ಸಂಸ್ಥೆಗಳ ಕಾರ್ಯಚಟುವಟಿಕೆಗಳು ಎಂದಿನಂತೆಯೇ ನಡೆಯುವುದರಿಂದ ಬಹುತೇಕ ಎಲ್ಲಾ ಸೇವೆಗಳು ದೊರೆಯಲಿವೆ.

ಹೀಗಾಗಿ, ನಗರದ ಕೇಂದ್ರ ಭಾಗವಾದ ಪುರಭವನ, ಕಾರ್ಪೊರೇಷನ್ ವೃತ್ತ, ಮೈಸೂರು ಬ್ಯಾಂಕ್ ವೃತ್ತ, ಸ್ವಾತಂತ್ರ್ಯ ಉದ್ಯಾನ ಮತ್ತು ಮೌರ್ಯ ವೃತ್ತಕ್ಕೆ ಬಂದ್ ಸೀಮಿತವಾಗುವ ಸಾಧ್ಯತೆಗಳಿವೆ.

**ರೈತರ ಹೋರಾಟಕ್ಕೆ ಸಂಪೂರ್ಣ ಬೆಂಬಲ:** ರೈತರು ಕರೆ ನೀಡಿರುವ ಡಿ.8ರ ಭಾರತ್ ಬಂದ್‌ಗೆ ನಮ್ಮ ಸಂಪೂರ್ಣ ಬೆಂಬಲವಿದೆ. ಬೆಳಗ್ಗೆ 6ರಿಂದ ಸಂಜೆ 6ರ ತನಕ ನಾವು ಯಾವುದೇ ವ್ಯಾಪಾರ-ವಹಿವಾಟಿನಲ್ಲಿ ತೊಡಗಿಸಿಕೊಳ್ಳುವುದಿಲ್ಲ. ರೈತ ಸಂಘಟನೆಗಳು ನಡೆಸುವ ಹೋರಾಟದಲ್ಲಿ ಪಾಲ್ಗೊಳ್ಳುವುದಾಗಿ ಬೀದಿಬದಿ ವ್ಯಾಪಾರಿಗಳ ಸಂಘದ ರಾಜ್ಯಾಧ್ಯಕ್ಷ ರಂಗಸ್ವಾಮಿ ತಿಳಿಸಿದ್ದಾರೆ.

ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಮಾತನಾಡಿ, ಮೈಸೂರು ಬ್ಯಾಂಕ್ ವೃತ್ತದ ಮೂಲಕ ಸ್ವಾತಂತ್ರ್ಯ ಉದ್ಯಾನಕ್ಕೆ ಜಾಥಾ ಹೊರಡಲು ಗುರುತಿಸಿದೆ ಎಂದು ತಿಳಿಸಿದರು.

ಬಂದ್ ನಡೆಸುವ ಕುರಿತು ಮಾತನಾಡಿದ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್, ಬೆಳಗ್ಗೆ 9ಕ್ಕೆ ಬೆಂಗಳೂರಿನ ಮೌರ್ಯ ವೃತ್ತದ ಬಳಿ ಜಮಾಯಿಸಿ ಹೋರಾಟ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಪಿ.ಸಿ. ರಾವ್ ಮಾತನಾಡಿ, ಈಗಾಗಲೇ ಕೊರೋನಾದಿಂದ ಸಾಕಷ್ಟು ಆರ್ಥಿಕ ನಷ್ಟ ಅನುಭವಿಸುತ್ತಿರುವುದರಿಂದ ಭಾರತ್ ಬಂದ್‌ಗೆ ಸಂಘವು ನೈತಿಕ ಬೆಂಬಲ ನೀಡಿದೆ ಎಂದರು.

## ಯಶವಂತಪುರ ದಿನಸಿ ಮಳಿಗೆ ಸ್ಥಗಿತ; ಸಿಂಗೇನ ಅಗ್ರಹಾರವೂ ಸ್ತಬ್ಧ
### ಕಲಾಸಿಪಾಳ್ಯ – ಕೆ.ಆರ್.ಮಾರುಕಟ್ಟೆ ವ್ಯಾಪಾರಸ್ಥರಿಂದ ಬಂದ್‌ಗೆ ಬರೀ ನೈತಿಕ ಬೆಂಬಲ | ಎಂದಿನಂತೆ ವ್ಯವಹಾರ



▪ ತರಕಾರಿ, ಹೂವು, ಹಣ್ಣು ಇತ್ಯಾದಿ ಉತ್ಪನ್ನಗಳು ಮಾರುಕಟ್ಟೆಗೆ ಪ್ರತಿದಿನ ಬರುವುದರಿಂದ ಅವುಗಳನ್ನು ವಾಪಸ್ ಕಳುಹಿಸಲಾಗದು: ವ್ಯಾಪಾರಿಗಳು

ಬೆಂಗಳೂರು: ಕೃಷಿ ಮಸೂದೆ ವಿರೋಧಿಸಿ ರೈತ ಸಂಘಟನೆಗಳು ಕರೆ ನೀಡಿರುವ ಭಾರತ್ ಬಂದ್‌ಗೆ ಕೆ.ಆರ್. ಮಾರುಕಟ್ಟೆ, ಕಲಾಸಿಪಾಳ್ಯ ಮಾರುಕಟ್ಟೆ ವ್ಯಾಪಾರಿಗಳು ನೈತಿಕ ಬೆಂಬಲ ನೀಡಲಿರುವುದರಿಂದ ನಗರದ ಎಲ್ಲ ಮಾರುಕಟ್ಟೆಗಳು ಮಂಗಳವಾರ ಎಂದಿನಂತೆ ಕಾರ್ಯ ನಿರ್ವಹಿಸಲಿವೆ. ಆದರೆ, ನಗರದ ಹೊರವಲಯದಲ್ಲಿರುವ ಸಿಂಗೇನ ಅಗ್ರಹಾರ ಮಾರುಕಟ್ಟೆ ವ್ಯಾಪಾರಸ್ಥರು ತಾವು ವ್ಯಾಪಾರವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿ ರೈತರ ಹೋರಾಟಕ್ಕೆ ಬೆಂಬಲ ನೀಡಲಿದ್ದೇವೆ ಎಂದಿದ್ದಾರೆ.

ಪ್ರತಿದಿನದಂತೆ ತರಕಾರಿ, ಹೂವು, ಹಣ್ಣು ಇತ್ಯಾದಿ ರೈತ ಉತ್ಪನ್ನಗಳು ಮಾರುಕಟ್ಟೆಗೆ ಬರುವುದರಿಂದ ಅವುಗಳನ್ನು ವಾಪಸ್ ಕಳುಹಿಸುವುದು ಅಥವಾ ಸಂಗ್ರಹಿಸಿಡುವುದು ಸಾಧ್ಯವಿಲ್ಲ. ಹೀಗಾಗಿ ಮಾರುಕಟ್ಟೆಗಳನ್ನು ಬಂದ್ ಮಾಡದಿರಲು ವ್ಯಾಪಾರಿಗಳು ನಿರ್ಧರಿಸಿದ್ದಾರೆ.

**ವ್ಯಾಪಾರ ಸ್ಥಗಿತ:** ರೈತರ ಹೋರಾಟಕ್ಕೆ ಬೆಂಬಲ ನೀಡಬೇಕಿರುವುದು ನಮ್ಮೆಲ್ಲರ ಕರ್ತವ್ಯ ಆದಕಾರಣ. ವ್ಯಾಪಾರ ಸ್ಥಗಿತಗೊಳಿಸುವ ಮೂಲಕ ರೈತರ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡುತ್ತೇವೆ ಎಂದು ಸಿಂಗೇನ ಅಗ್ರಹಾರ ಮಾರುಕಟ್ಟೆಯ ಅಧ್ಯಕ್ಷ ಮಹೀನ್ ಸಾಬ್ ತಿಳಿಸಿದ್ದಾರೆ.

ಬಂದ್ ಸಂಬಂಧ ಸಿಂಗೇನ ಅಗ್ರಹಾರದ ಹಣ್ಣು ಮತ್ತು ತರಕಾರಿ ಮಾರುಕಟ್ಟೆ ಸಭಾಂಗಣದಲ್ಲಿ ನಡೆದ ತುರ್ತು ಸಭೆ ಉದ್ದೇಶಿಸಿ ಮಾತನಾಡಿದ ಅವರು, ನಮಗೆ ಅನ್ನ ನೀಡುವ ಅನ್ನದಾತರು ವಾರಗಳಿಂದ ಬೀದಿಯಲ್ಲಿ ಕುಳಿತು ನಿರಶನ ಮಾಡುತ್ತಿದ್ದಾರೆ. ಅವರ ಕೂಗು ದಿಲ್ಲಿ ದೊರೆಗಳಿಗೆ ತಲುಪುವಂತೆ ಮಾಡಬೇಕಾಗಿರುವುದು ನಮ್ಮೆಲ್ಲರ ಜವಾಬ್ದಾರಿ ಎಂದರು. ಅಧ್ಯಕ್ಷರ ನಿರ್ಧಾರಕ್ಕೆ ಬಹುತೇಕ ವ್ಯಾಪಾರಸ್ಥರು ಬೆಂಬಲ ಸೂಚಿಸಿದರು.

### ಪ್ರತಿಭಟನೆಗೆ ಬೆಂಬಲ

ಯಶವಂತಪುರ ಎಪಿಎಂಸಿ ಯಲ್ಲಿ ಅಕ್ಕಿ, ಬೇಳೆ, ಗೋಧಿ, ಸಕ್ಕರೆ, ಮೊಸಂಬಾಯಿ, ಕಾಳುಗಳು ಸೇರಿದಂತೆ ಎಲ್ಲ ಬಗೆಯ ದಿನಸಿ ಪದಾರ್ಥಗಳ ಮಾರಾಟ ಮಳಿಗೆಗಳನ್ನು ಸ್ಥಗಿತಗೊಳಿಸಿ, ಬಂದ್‌ಗೆ ಬೆಂಬಲ ನೀಡುತ್ತಿದ್ದೇವೆ ಎಂದು ಯಶವಂತಪುರ ಎಪಿಎಂಸಿ ಆಹಾರಧಾನ್ಯ ಸಗಟು ವರ್ತಕರ ಸಂಘದ ಅಧ್ಯಕ್ಷ ರಮೇಶಚಂದ್ರ ಲಹೋಟಿ ತಿಳಿಸಿದರು.

### ಸಂಚಾರ ಬದಲಾವಣೆ

ಬೆಂಗಳೂರು: ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳನ್ನು ವಿರೋಧಿಸಿ ರೈತ ಸಂಘಟನೆಗಳು ಕರೆ ನೀಡಿರುವ ಭಾರತ್ ಬಂದ್ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ನಗರದ ಕೇಂದ್ರ ಭಾಗದಲ್ಲಿ ಸಂಚಾರ ವ್ಯವಸ್ಥೆಯನ್ನು ಪೊಲೀಸರು ಬದಲಾಯಿಸಿದ್ದಾರೆ. ಬಂದ್ ಬೆಂಬಲಿಸಿ ನಗರದ ಟೌನ್‌ಹಾಲ್ ವೃತ್ತದಿಂದ ಕೆ.ಜಿ.ರಸ್ತೆ ಮೈಸೂರು ಬ್ಯಾಂಕ್ ವೃತ್ತದಿಂದ ಫ್ರೀಡಂ ಪಾರ್ಕ್‌ವರೆಗೆ ಮೆರವಣಿಗೆ, ಕನ್ನಡ ಚಳವಳಿ ವಾಟಾಳ್ ಪಕ್ಷ, ರಾಜ್ಯ ರೈತ ಸಂಘ ಸೇರಿದಂತೆ ಇತರೆ ಸಂಘಟನೆಗಳು ಜಾಥಾ ನಡೆಸಲಿವೆ. ಈ ಹಿನ್ನೆಲೆಯಲ್ಲಿ ಕೆ.ಜಿ.ರಸ್ತೆಯ ವಾಹನಗಳ ಸುಗಮ ಸಂಚಾರಕ್ಕೆ ಯಾವುದೇ ರೀತಿಯಲ್ಲಿ ಅಡಚಣೆ ಉಂಟಾಗದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ. ನೃಪತುಂಗ ರಸ್ತೆಯನ್ನು ಕೆ.ಆರ್.ವೃತ್ತದಿಂದ ಪೊಲೀಸ್ ಕಾರ್ನರ್‌ವರೆಗೆ ದ್ವಿಮುಖ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ಈ ವ್ಯವಸ್ಥೆ ಮಂಗಳವಾರ ಬೆಳಗ್ಗೆ 6ರಿಂದ ಬುಧವಾರ ಬೆಳಗ್ಗೆ 6 ಗಂಟೆವರೆಗೆ ಇರಲಿದೆ. ಜನರು ಸಹಕರಿಸಬೇಕು ಎಂದು ಪೊಲೀಸರು ಕೋರಿದ್ದಾರೆ.

## ಐಕ್ಯ ಹೋರಾಟ ಸಮಿತಿಯಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ
### ಸರ್ಕಾರಗಳ ವಿರುದ್ಧ ಆಕ್ರೋಶ | ರೈತ, ಕಾರ್ಮಿಕ ವಿರೋಧಿ ನೀತಿಗೆ ಮುಂದಾಗಿವೆ: ಆರೋಪ



ಮೌರ್ಯ ಸರ್ಕಲ್‌ನಲ್ಲಿ ವಿವಿಧ ಸಂಘಟನೆ ಮುಖಂಡರು ಪ್ರತಿಭಟಿಸಿದರು.

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೇಂದ್ರ ಹಾಗೂ ರಾಜ್ಯ ಸರ್ಕಾರ ರೈತ, ಕಾರ್ಮಿಕ, ದಲಿತ ವಿರೋಧಿ ಕಾಯ್ದೆಗಳ ಜಾರಿಗೆ ಮುಂದಾಗಿದೆ ಎಂದು ಆರೋಪಿಸಿ ರೈತ, ದಲಿತ, ಕಾರ್ಮಿಕ, ಜನಪರ ಸಂಘಟನೆಗಳ ಐಕ್ಯ ಹೋರಾಟ ಸಮಿತಿಯಿಂದ ಸೋಮವಾರ ನಗರದ ಮೌರ್ಯ ವೃತ್ತದ ಗಾಂಧಿ ಪ್ರತಿಮೆ ಎದುರು ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು, ದೆಹಲಿಯಲ್ಲಿ ಪ್ರತಿಭಟನಾನಿರತ ರೈತರ ಮೇಲಿನ ಪೊಲೀಸ್ ದೌರ್ಜನ್ಯ ಖಂಡಿಸಿದರು. ಅಂತೆಯೇ ಕೇಂದ್ರ ಹಾಗೂ ರಾಜ್ಯ ಸರ್ಕಾರ ರೈತ, ಕಾರ್ಮಿಕ, ದಲಿತ, ಗ್ರಾಹಕ ದ್ರೋಹಿ ಕಾಯ್ದೆ ಹಾಗೂ ಸುಗ್ರೀವಾಜ್ಞೆಗಳನ್ನು ಜಾರಿಗೆ ತಂದು ಅನ್ಯಾಯ ಮಾಡುತ್ತಿವೆ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ರೈತ ಮುಖಂಡ ಕುರುಬೂರು ಶಾಂತಕುಮಾರ್, ಪ್ರೊ. ರವಿವರ್ಮ ಕುಮಾರ್, ಸಾಮಾಜಿಕ ಕಾರ್ಯಕರ್ತ ಎಸ್.ಆರ್.ಹಿರೇಮಠ, ಮಾಜಿ ಶಾಸಕ ಬಿ.ಆರ್.ಪಾಟೀಲ, ನಾಗಮೋಹನ ದಾಸ್ ಮುಂತಾದವರಿದ್ದರು.

VK ವಿಜಯ ಕರ್ನಾಟಕ

| Date | 08-12-2020 |
| --- | --- |
| Page No | 9 |



# ಪಾರ್ಕಿಂಗ್ ಇಲ್ಲದೆ ವಾಹನಗಳು ಬೀದಿಪಾಲು!

ವಾಹನ ನಿಲುಗಡೆಗೆ ಬದ್ಧತೆ ಪ್ರಮಾಣ ಸಲ್ಲಿಸಿದರಷ್ಟೇ ವಾಹನ ಖರೀದಿಗೆ ಅನುಮತಿ ನೀಡಲು ಸರಕಾರ ಚಿಂತನೆ ನಡೆಸಿರುವ ಹಿನ್ನೆಲೆಯಲ್ಲಿ ನಗರದಲ್ಲಿ ವಾಹನಗಳ ಪಾರ್ಕಿಂಗ್ ವಿಚಾರ ಮತ್ತೆ ಸದ್ದು ಮಾಡಿದೆ. ಈ ಹಿಂದೆ ರಸ್ತೆ ಬದಿ ನಿಲ್ಲಿಸುವ ವಾಹನಗಳಿಗೆ ಮಾಸಿಕ 50 ರೂ. ಶುಲ್ಕ ಸಂಗ್ರಹಿಸುವ ವಿಷಯ ಪ್ರಸ್ತಾಪವಾದಾಗಲೂ ತೀವ್ರ ಚರ್ಚೆ ನಡೆದಿತ್ತು. ಆದರೆ, ನಗರದಲ್ಲಿ ವಾಹನಗಳ ನಿಲುಗಡೆ ಸಮಸ್ಯೆ ಇಂದು- ನಿನ್ನೆಯದಲ್ಲ. ಜಾಗದ ಕೊರತೆಯಿಂದ ಪಾರ್ಕಿಂಗ್ ಸಮಸ್ಯೆ ಮಾಲೀಕರನ್ನು ಕಾಡುತ್ತಿದೆ. ಈ ಕುರಿತು ಬೆಳಕು ಚೆಲ್ಲುವ ಸರಣಿ ಇಂದಿನಿಂದ ಆರಂಭ.

## ನಗರದಲ್ಲಿ ಪಾಲನೆಯಾಗದ ಕಟ್ಟಡ ನಿಯಮಾವಳಿ | ಪಾರ್ಕಿಂಗ್‌ಗೆ ಜಾಗ ಬಿಡದ ಕಟ್ಟಡಗಳು


■ ನಾಗಪ್ಪ ನಾಗನಾಯಕನಹಳ್ಳಿ
ಬೆಂಗಳೂರು
nagappa.narayanappa@timesgroup.com


- ವಾಹನಗಳಿಂದ ರಸ್ತೆ, ಫುಟ್‌ಪಾತ್ ಅತಿಕ್ರಮಣ
- ನಿಯಮ ಉಲ್ಲಂಘಿಸಿರುವ ಕಟ್ಟಡಗಳ ವಿರುದ್ಧ ಕ್ರಮವಿಲ್ಲ
- ಕೆಲ ಕಟ್ಟಡಗಳ ಪಾರ್ಕಿಂಗ್ ಜಾಗದಲ್ಲಿ ಮಳಿಗೆಗಳ ನಿರ್ಮಾಣ
- ಪ್ರಭಾವಿಗಳ ಒತ್ತಡಕ್ಕೆ ಮಣಿದು ಕಾರ್ಯಾಚರಣೆ ಸ್ಥಗಿತ

ನಗರದ ಪ್ರತಿಯೊಂದು ಕಟ್ಟಡದಲ್ಲಿ ವಾಹನಗಳ ನಿಲುಗಡೆಗೆ ಇಂತಿಷ್ಟು ಜಾಗ ಮೀಸಲಿಡಲೇಬೇಕೆಂಬ ನಿಯಮವಿದೆ. ಆದರೆ, ಇದು ಕಾಗದದಲ್ಲೇ ಉಳಿದಿದ್ದು, ಬಹುತೇಕ ಕಟ್ಟಡಗಳಲ್ಲಿ ಪಾರ್ಕಿಂಗ್ ಸೌಲಭ್ಯವೇ ಇಲ್ಲ. ಇದರಿಂದಾಗಿ ವಾಹನಗಳು ವಿಶ್ರಾಂತಿಗಾಗಿ ರಸ್ತೆಗಳನ್ನೇ ಆಶ್ರಯಿಸುವಂತಾಗಿದೆ.

ಕಟ್ಟಡ ಬೈಲಾದಂತೆ ಪ್ರತಿಯೊಂದು ವಸತಿ ಮತ್ತು ವಾಣಿಜ್ಯ ಕಟ್ಟಡಗಳಲ್ಲಿ ಪಾರ್ಕಿಂಗ್ ಸೌಲಭ್ಯ ಕಲ್ಪಿಸಬೇಕಿದೆ. ನಗರದಲ್ಲಿ ಸುಮಾರು 28 ಲಕ್ಷ ಸ್ವತ್ತುಗಳಿದ್ದು, ಇವುಗಳಲ್ಲಿನ ಶೇ 80ರಷ್ಟು ಕಟ್ಟಡಗಳಲ್ಲಿ ಪಾರ್ಕಿಂಗ್ ವ್ಯವಸ್ಥೆಯೇ ಇಲ್ಲ. ಹಲವು ಪ್ರದೇಶಗಳಲ್ಲಿ ವಾಹನಗಳು ಫುಟ್‌ಪಾತ್ ಮತ್ತು ರಸ್ತೆಯ ಅರ್ಧ ಭಾಗವನ್ನು ನುಂಗಿ ಹಾಕಿವೆ. ಇಕ್ಕಟ್ಟಾದ ರಸ್ತೆಗಳ ಇಕ್ಕೆಲಗಳಲ್ಲಿ ವಾಹನಗಳನ್ನು ನಿಲುಗಡೆ ಮಾಡುವುದರಿಂದ ಟ್ರಾಫಿಕ್ ಜಾಮ್ ಉಂಟಾಗುತ್ತಿದೆ. ಪಾದಚಾರಿಗಳ ಓಡಾಟಕ್ಕೂ ಜಾಗವಿಲ್ಲದ ಸ್ಥಿತಿ ನಿರ್ಮಾಣವಾಗಿದೆ.

ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣ ಪತ್ರ (ಒಸಿ) ನೀಡುವಾಗ ವಾಹನಗಳ ನಿಲುಗಡೆಗೆ ಜಾಗ ಬಿಡಲಾಗಿದೆಯೇ, ಇಲ್ಲವೇ ಎಂಬುದನ್ನು ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ಪರಿಶೀಲನೆ ನಡೆಸಬೇಕು. ಆದರೆ, ಮಾಲೀಕರೊಂದಿಗೆ ಶಾಮೀಲಾಗುವ ಅಧಿಕಾರಿಗಳು ಜಾಣಕುರುಡುತನ ಪ್ರದರ್ಶಿಸುತ್ತಿದ್ದಾರೆ. ಹೊಸದಾಗಿ ನಿರ್ಮಿಸುತ್ತಿರುವ ಕಟ್ಟಡಗಳಲ್ಲೂ ಪಾರ್ಕಿಂಗ್‌ಗೆ ಜಾಗವನ್ನೇ ಬಿಡುತ್ತಿಲ್ಲ. ಪಾರ್ಕಿಂಗ್ ಸೌಲಭ್ಯವಿಲ್ಲದ ಕಟ್ಟಡಗಳು ಪ್ರತಿ ರಸ್ತೆಯಲ್ಲೂ ಕಾಣಸಿಗುತ್ತವೆ. ಆದಾಗ್ಯೂ, ಮಾಲೀಕರ ವಿರುದ್ಧ ಕ್ರಮ ಜರುಗಿಸುತ್ತಿಲ್ಲ.

ಪಾರ್ಕಿಂಗ್ ಪ್ರಾಬ್ಲೆಮ್
ಭಾಗ-1



### ಅನ್ಯ ಉದ್ದೇಶಕ್ಕೆ ಪಾರ್ಕಿಂಗ್ ಜಾಗ ಬಳಕೆ

ನಿಯಮಾವಳಿಯಂತೆ ವಾಣಿಜ್ಯ ಕಟ್ಟಡಗಳ ನೆಲಮಹಡಿಯನ್ನು ವಾಹನಗಳ ನಿಲುಗಡೆಗೆ ಮೀಸಲಿಡಬೇಕಿದೆ. ಆದರೆ, ಆ ಜಾಗಗಳಲ್ಲೂ ಮಳಿಗೆಗಳು ತಲೆ ಎತ್ತಿವೆ. ಕ್ಯಾಂಟೀನ್, ವರ್ಕ್‌ಶಾಪ್, ಗುಜರಿ ಸಂಗ್ರಹ ಸೇರಿದಂತೆ ಇನ್ನಿತರ ಉದ್ದೇಶಗಳಿಗೆ ಪಾರ್ಕಿಂಗ್ ಜಾಗವನ್ನು ಬಳಸಲಾಗುತ್ತಿದೆ. ಹಾಗಾಗಿ, ಬಹುತೇಕ ವಾಣಿಜ್ಯ ಕಟ್ಟಡಗಳಲ್ಲಿ ವಾಹನಗಳ ನಿಲುಗಡೆಗೆ ಜಾಗ ಸಿಗುತ್ತಿಲ್ಲ. ಇಲ್ಲಿಗೆ ಬರುವ ಗ್ರಾಹಕರು ತಮ್ಮ ವಾಹನಗಳ ನಿಲುಗಡೆಗೆ ರಸ್ತೆಗಳನ್ನೇ ಪಾರ್ಕಿಂಗ್ ತಾಣವನ್ನಾಗಿ ಮಾಡಿಕೊಂಡಿದ್ದಾರೆ. ಪಾಲಿಕೆಯ ಅಧಿಕಾರಿಗಳು ಕಳೆದ ವರ್ಷ ಪಾರ್ಕಿಂಗ್ ಜಾಗವನ್ನು ಅನ್ಯ ಉದ್ದೇಶಕ್ಕೆ ಉಪಯೋಗಿಸುತ್ತಿದ್ದ ಕಟ್ಟಡಗಳ ವಿರುದ್ಧ ಸಮರ ಸಾರಿದ್ದರು. ಕೆಲವೆಡೆ ತೆರವು ಕಾರ್ಯಾಚರಣೆ ಕೈಗೊಂಡು ಬೀಗ ಮುಟ್ಟಿಸಿದರು. ವಾಹನಗಳ ನಿಲುಗಡೆಗೆ ಜಾಗ ಮೀಸಲಿಡದ ಕಟ್ಟಡಗಳಿಗೆ ನೀಡಿರುವ ಒಸಿ ರದ್ದುಪಡಿಸುವುದಾಗಿ ಎಚ್ಚರಿಕೆ ಸಹ ನೀಡಲಾಗಿತ್ತು. ಪ್ರಭಾವಿಗಳು, ಜನಪ್ರತಿನಿಧಿಗಳ ಒತ್ತಡಕ್ಕೆ ಮಣಿದ ಪಾಲಿಕೆಯು, ಕಾರ್ಯಾಚರಣೆಯನ್ನು ಆರಂಭಗೊಳಿಸಿದಷ್ಟೇ ವೇಗದಲ್ಲಿ ಸ್ಥಗಿತಗೊಳಿಸಿತು.

ರಾಜಧಾನಿಯಲ್ಲಿ ಭೂಮಿ ಬೆಲೆಯು ಗಗನಕ್ಕೇರಿದ್ದು, ಲಭ್ಯವಿರುವ ವಿಸ್ತೀರ್ಣದಲ್ಲೇ ಗಗನಚುಂಬಿ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ. ಒಂದಿಂಚೂ ಜಾಗ ಬಿಡದಂತೆ ಗರಿಷ್ಠ ಮಟ್ಟದಲ್ಲಿ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಬಿಲ್ಡರ್‌ಗಳು ಕೂಡ ವಾಹನಗಳ ನಿಲುಗಡೆಗೆ 'ತಾವು' ಕಲ್ಪಿಸುತ್ತಿಲ್ಲ. ಹೀಗಾಗಿ, ವಾಹನಗಳು ಬೀದಿಗೆ ಬೀಳುತ್ತಿವೆ. ಬಾಡಿಗೆ ಮನೆಗಳ ಬಳಿಯಂತೂ ಪಾರ್ಕಿಂಗ್‌ಗೆ ಸ್ಥಳಾವಕಾಶವೇ ಇರುವುದಿಲ್ಲ. ಪಾರ್ಕಿಂಗ್‌ಗೆ ಜಾಗ ಬಿಡುವ ಬದಲು ಅಲ್ಲೊಂದು ಕೊಠಡಿ ನಿರ್ಮಿಸಿದರೆ ಬಾಡಿಗೆ ಬರುತ್ತದೆ ಎಂಬ ಆಸೆ ಮಾಲೀಕರದ್ದು. ಇದರಿಂದ ವಾಹನಗಳನ್ನು ಅಸುರಕ್ಷಿತವಾಗಿ ಪಾದಚಾರಿ ಮಾರ್ಗ ಮತ್ತು ರಸ್ತೆ ಬದಿಯಲ್ಲಿ ನಿಲ್ಲಿಸಲಾಗುತ್ತಿದೆ. ಇದರಿಂದ ವಾಹನಗಳು ಕಳವಾಗುತ್ತಿವೆ.

### ಕಟ್ಟಡ ಬೈಲಾದಂತೆ ಪಾರ್ಕಿಂಗ್‌ಗೆ ಮೀಸಲಿಡಬೇಕಿರುವ ಜಾಗ

| ಕಟ್ಟಡದ ವಿಧ | ಅಗತ್ಯ ಕಾರು ನಿಲುಗಡೆ ಪ್ರದೇಶ (ಪ್ರತಿ ಕಾರು ನಿಲುಗಡೆಗೆ 2.5/ 5.5 ಮೀ. ಪ್ರದೇಶ) |
| --- | --- |
| ವಾಣಿಜ್ಯ ಕಟ್ಟಡಗಳು (ಮಾಲ್, ಮಳಿಗೆಗಳು) | ಪ್ರತಿ 50 ಚ.ಮೀ. ಗೆ ಒಂದರಂತೆ |
| ಮಲ್ಟಿಪ್ಲೆಕ್ಸ್ | ಕಟ್ಟಡದ 40 ಚ.ಮೀ. ಗೆ ಒಂದರಂತೆ |
| ಸಗಟು ಮಾರಾಟ ಮಳಿಗೆ/ ಗೋದಾಮು | ಕಟ್ಟಡದ ಪ್ರತಿ 150 ಚ.ಮೀ.ಗೆ ಒಂದರಂತೆ ಮತ್ತು 3.5/7.5 ಮೀ. ಅಳತೆ ಅಧಿಕ ಲಾರಿ ಪಾರ್ಕಿಂಗ್ |
| ರೆಸ್ಟೋರೆಂಟ್ | ಕಟ್ಟಡದ ಪ್ರತಿ 75 ಚ.ಮೀ. ಗೆ ಒಂದರಂತೆ |
| ಲಾಡ್ಜ್, ಹೋಟೆಲ್, ಟೂರಿಸ್ಟ್ ಹೋಂ | ಕಟ್ಟಡದ ಪ್ರತಿ 80 ಚ.ಮೀ. ಗೆ ಒಂದರಂತೆ |
| ಸ್ಟಾರ್ ಹೋಟೆಲ್ | ಕಟ್ಟಡದಲ್ಲಿನ ಪ್ರತಿ ಎರಡು ಕೊಠಡಿಗೆ ಒಂದರಂತೆ ಮತ್ತು ಶೇ 10ರಷ್ಟು ಅಧಿಕ |
| ಸರಕಾರಿ ಕಟ್ಟಡಗಳು | ಕಟ್ಟಡದ ಪ್ರತಿ 50 ಚ.ಮೀ. ಗೆ ಒಂದರಂತೆ |
| ಹಾಸ್ಟೆಲ್ | ವೃತ್ತಿಪರ ಕಾಲೇಜು ಹಾಸ್ಟೆಲ್‌ಗಳಲ್ಲಿ ಕಟ್ಟಡದ ಪ್ರತಿ 5 ಕೊಠಡಿಗೆ ಒಂದರಂತೆ, ಉಳಿದವು ಕಟ್ಟಡದ ಪ್ರತಿ 10 ಕೊಠಡಿಗೆ ಒಂದರಂತೆ |
| ಕೈಗಾರಿಕಾ ಕಟ್ಟಡ | ಕಟ್ಟಡದ ಪ್ರತಿ 100 ಚ.ಮೀ. ಗೆ ಒಂದರಂತೆ ಮತ್ತು ಪ್ರತಿ ಸಾವಿರ ಚ.ಮೀ. ಗೆ ಒಂದರಂತೆ ಲಾರಿಗೆ ಸ್ಥಳ |
| ನರ್ಸಿಂಗ್ ಹೋಂ | ಪ್ರತಿ 50 ಚ.ಮೀ. ಗೆ ಒಂದರಂತೆ |
| ಆಸ್ಪತ್ರೆ | ಪ್ರತಿ 100 ಚ.ಮೀ ಗೆ ಒಂದರಂತೆ |
| ವಸತಿ ಸಂಕೀರ್ಣ | ಪ್ರತಿ 50 ಚ.ಮೀ ಗೆ ಒಂದರಂತೆ |
| ಕಲ್ಯಾಣ ಮಂಟಪ / ಸಭಾಂಗಣ | ಪ್ರತಿ 50 ಚ.ಮೀ ಗೆ ಒಂದರಂತೆ |
| ಕ್ಲಬ್ | ಪ್ರತಿ 50 ಚ.ಮೀ. ಗೆ ಒಂದರಂತೆ |
| ಶಿಕ್ಷಣ ಸಂಸ್ಥೆಗಳ ಕಟ್ಟಡಗಳು | ಪ್ರತಿ 150 ಚ.ಮೀ. ಗೆ ಒಂದರಂತೆ |
| ಅರೆ ಸರಕಾರಿ ಕಟ್ಟಡಗಳು | ಪ್ರತಿ 100 ಚ.ಮೀ. ಗೆ ಒಂದರಂತೆ |

| Date | 08-12-2020 |
|---|---|
| Page No | 9 |

# ಇಂದು ನೃಪತುಂಗ ರಸ್ತೆಯಲ್ಲಿ ದ್ವಿಮುಖ ವಾಹನ ಸಂಚಾರ

**ಬೆಂಗಳೂರು:** ಭಾರತ್ ಬಂದ್ ಹಿನ್ನೆಲೆಯಲ್ಲಿ ನೃಪತುಂಗ ರಸ್ತೆಯಲ್ಲಿ ಅಂದರೆ, ಕೆ.ಆರ್.ವೃತ್ತದಿಂದ ಪೊಲೀಸ್ ಕಾರ್ನರ್ ಹಾಗೂ ಪೊಲೀಸ್ ಕಾರ್ನರ್‌ನಿಂದ ಕೆ.ಆರ್. ವೃತ್ತದವರೆಗೆ ದ್ವಿಮುಖ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಿ ನಗರ ಪೊಲೀಸ್ ಆಯುಕ್ತ ಕಮಲ್ ಪಂತ್ ಆದೇಶ ಹೊರಡಿಸಿದ್ದಾರೆ.

ರೈತ ಸಂಘಟನೆಗಳು ಟೌನ್‌ಹಾಲ್ ವೃತ್ತದಿಂದ ಎನ್.ಆರ್. ಸ್ಕ್ವೇರ್, ಕೆ.ಜಿ. ರಸ್ತೆ, ಮೈಸೂರು ಬ್ಯಾಂಕ್ ವೃತ್ತದ ಮೂಲಕ ಫ್ರೀಡಂ ಪಾರ್ಕ್‌ವರೆಗೆ ಜಾಥಾ ಹಾಗೂ ಎತ್ತಿನ ಬಂಡಿಗಳಲ್ಲಿ ಸಾಗಿ ಪ್ರತಿಭಟನೆ ನಡೆಸಲಿರುವುದರಿಂದ ಸುಗಮ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಲು ಈ ಕ್ರಮ ಜರುಗಿಸಲಾಗಿದೆ.

- ಪ್ರತಿಭಟನೆ ವೇಳೆ ಪೊಲೀಸ್ ಕಾರ್ನರ್ ಬಳಿ ಕೆ.ಜಿ. ರಸ್ತೆಗೆ ಎಡ ತಿರುವು ಪಡೆದು ಸಾಗುವುದನ್ನು ನಿರ್ಬಂಧಿಸಲಾಗಿದೆ.
- ಹಲಸೂರು ಪೊಲೀಸ್ ಠಾಣೆ ಕಡೆಯಿಂದ ಬಂದು ಪೊಲೀಸ್ ಕಾರ್ನರ್ ಬಳಿ ಎಡ ತಿರುವು ಪಡೆದು ಕೆಜಿ ರಸ್ತೆ ಕಡೆಗೆ ಸಾಗುವ ವಾಹನಗಳು ಪೊಲೀಸ್ ಕಾರ್ನರ್‌ನಿಂದ ನೇರವಾಗಿ ನೃಪತುಂಗ ರಸ್ತೆಗೆ ಪ್ರವೇಶ ಪಡೆದು ನೃಪತುಂಗ ರಸ್ತೆಯಲ್ಲಿ ಸಾಗಿ ಕೆ.ಆರ್.ವೃತ್ತ ತಲುಪಿ ಮುಂದುವರಿಯಬಹುದು.
- ನೃಪತುಂಗ ರಸ್ತೆಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ಏಕಮುಖ ಸಂಚಾರವನ್ನು ದ್ವಿಮುಖ ಸಂಚಾರ ವ್ಯವಸ್ಥೆಗೆ ಪರಿವರ್ತಿಸಲಾಗಿದೆ. 8ರಂದು ಬೆಳಗ್ಗೆ 6 ಗಂಟೆಯಿಂದ 9 ರ ಬೆಳಿಗ್ಗೆ 6 ಗಂಟೆವರೆಗೆ ಈ ವ್ಯವಸ್ಥೆ ಜಾರಿಯಲ್ಲಿರಲಿದೆ.

ವಿಜಯವಾಣಿ
ಕನ್ನಡಿಗರ ಧ್ವನಿ

| Date | 08-12-2020 |
|---|---|
| Page No | 3 |

### ತಿಂಗಳೊಳಗೆ ಪಾಲಿಕೆಗೆ ಅರ್ಜಿ ಸಲ್ಲಿಸಿ | ಅಪಘಾತದ ಸ್ಥಳ, ವೈದ್ಯಕೀಯ ಬಿಲ್ ಲಗತ್ತಿಸಿ

# ರಸ್ತೆಗುಂಡಿಯಿಂದಾದ ಸಾವಿಗೆ ಪರಿಹಾರ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಸಿಲಿಕಾನ್ ಸಿಟಿಯಲ್ಲಿ ರಸ್ತೆಗುಂಡಿ ಪರಿಣಾಮ ಬಿದ್ದು ಗಾಯಗೊಂಡವರಿಗೆ ಹಾಗೂ ಮೃತಪಟ್ಟ ವಾಹನ ಸವಾರರ ಕುಟುಂಬಗಳಿಗೆ 15 ಸಾವಿರ ರೂ.ಗಳಿಂದ 3 ಲಕ್ಷ ರೂ.ವರೆಗೆ ಪರಿಹಾರ ನೀಡಲು ಬಿಬಿಎಂಪಿ ಮುಂದಾಗಿದೆ.

ಹದಗೆಟ್ಟ ರಸ್ತೆಯಲ್ಲಿ ಸಂಚಾರ ಮಾಡಿ ಗಾಯಗೊಂಡ ವಾಹನಸವಾರರು ತಿಂಗಳ ಒಳಗಾಗಿ ಪಾಲಿಕೆ ಕಂದಾಯ ವಿಭಾಗದ ವಿಶೇಷ ಆಯುಕ್ತರಿಗೆ ಸ್ಥಳ, ಗಾಯದ ವಿಧ, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ವಿವರದ ದಾಖಲೆಗಳನ್ನು ಒಳಗೊಂಡ ಅರ್ಜಿ ಸಲ್ಲಿಸಬೇಕು. ಮೃತರ ಕುಟುಂಬದವರು ವೈದ್ಯಕೀಯ ವರದಿ ಮತ್ತು ಪೊಲೀಸ್ ಠಾಣೆ ವರದಿಯನ್ನು ಸಲ್ಲಿಸಬೇಕು. ಘಟನೆ ನಡೆದಾಗ ಸಿಸಿ ಕ್ಯಾಮರಾ ಇದ್ದರೆ ಅದರ ದೃಶ್ಯಾವಳಿಯನ್ನು ಸಾಕ್ಷಿಯಾಗಿ ಒದಗಿಸಬಹುದು.

**» ಮೂರು ತಿಂಗಳಲ್ಲಿ ಕೈಗೆಟುಕಲಿದೆ ಪರಿಹಾರ**

**ವಿಶೇಷ ಅಧಿಕಾರಿಯಿಂದ ಪರಿಶೀಲನೆ:** ರಸ್ತೆಗುಂಡಿಯಿಂದ ಅಪಘಾತಗೊಂಡು ಹಾನಿಗೀಡಾದ ಸಂತ್ರಸ್ತರ ಅರ್ಜಿ ಸಲ್ಲಿಕೆಯಾದ ಒಂದು ವಾರದಲ್ಲಿ ಕಂದಾಯ ವಿಭಾಗದ ವಿಶೇಷ ಅಧಿಕಾರಿಗಳು ಅಪಘಾತದ ದಾಖಲೆ ಮತ್ತು ಸ್ಥಳ ಪರಿಶೀಲನೆ ನಡೆಸಲಿದ್ದಾರೆ. ನಂತರ, ಪರಿಹಾರ ನೀಡಲು 45 ದಿನಗಳಲ್ಲಿ ವರದಿ ನೀಡುತ್ತಾರೆ. ಆ ವರದಿ ಆಧರಿಸಿ ಪಾಲಿಕೆ ಕೆಲಸದ 55 ದಿನಗಳ ತರುವಾಯ ಸಂತ್ರಸ್ತರ ಕೈಗೆ ಹಣ ದೊರಕುತ್ತದೆ.

**1 ಪ್ರಕರಣದಲ್ಲಿ ಪರಿಹಾರ ಲಭ್ಯ:** ಅಪಘಾತದಲ್ಲಿ ಯಾವುದಾದರೂ ಸ್ವತ್ತಿಗೆ ಹಾನಿಯಾಗಿದ್ದರೆ ಅಥವಾ ವ್ಯಕ್ತಿ ಮೃತಪಟ್ಟಿದ್ದರೆ, ಗಾಯಗೊಂಡಿದ್ದರೆ ಮೋಟಾರು ವಾಹನ ಕಾಯ್ದೆ ಪ್ರಕಾರ ಅಥವಾ ಬಿಬಿಎಂಪಿ ಮೂಲಕ ಒಂದು ಪ್ರಕರಣದಲ್ಲಿ ಮಾತ್ರ ಪರಿಹಾರ ಪಡೆಯಲು ಅರ್ಹರು. ಇದಕ್ಕಾಗಿ ವ್ಯಕ್ತಿಯು ಗಾಯಗೊಂಡ ಬಗ್ಗೆ ವೈದ್ಯಕೀಯ ಪ್ರಮಾಣಪತ್ರ ಅಥವಾ ವಾಹನಗಳಿಗೆ ಧಕ್ಕೆ ಆಗಿದ್ದಲ್ಲಿ ಆಟೋಮೊಬೈಲ್ ಸರ್ವೀಸ್ ಸೆಂಟರ್‌ನಿಂದ ಪ್ರಮಾಣ ಪತ್ರ ಲಗತ್ತಿಸಬೇಕು.


ವಿಜಯವಾಣಿ ಚಿತ್ರ

## ಹೈಕೋರ್ಟ್ ಆದೇಶ

ರಾಜಧಾನಿಯಲ್ಲಿ ಪ್ರತಿವರ್ಷ ಕನಿಷ್ಠ 500ಕ್ಕೂ ಹೆಚ್ಚು ಮಂದಿ ರಸ್ತೆಗುಂಡಿಯಿಂದಾಗಿ ಬಿದ್ದು ಅಥವಾ ಗುಂಡಿ ತಪ್ಪಿಸಲು ಹೋಗಿ ಬಿದ್ದು ಗಾಯಗೊಳ್ಳುತ್ತಾರೆ. ಆದರೆ ಬೆರಳೆಣಿಕೆ ಪ್ರಕರಣಗಳಲ್ಲಿ ಸಾವು ಸಂಭವಿಸುತ್ತದೆ. 2019ರ ಜೂನ್‌ನಲ್ಲಿ ಹೈಕೋರ್ಟ್ ನೀಡಿದ ಆದೇಶದ ಅನ್ವಯ ಪರಿಹಾರ ನಿಯಮದ ಬಗ್ಗೆ ಪಾಲಿಕೆ ಎರಡು ಬಾರಿ ಪ್ರಕಟಣೆ ಹೊರಡಿಸಿದೆ.

## ಅರ್ಜಿ ತಿರಸ್ಕಾರದ ಸಾಧ್ಯತೆಗಳು

ಬಿಬಿಎಂಪಿ ಮಾರ್ಗಸೂಚಿ ಪ್ರಕಾರ, ಪರಿಹಾರದ ಅರ್ಜಿ ತಿರಸ್ಕಾರಕ್ಕೂ ಅವಕಾಶವಿದೆ. ಅರ್ಜಿಯೊಂದಿಗೆ ಲಗತ್ತಿಸಿದ ದಾಖಲೆಗಳು ನಕಲಿಯಾಗಿದ್ದಲ್ಲಿ, ತಿಂಗಳ ಅವಧಿ ಮೀರಿದ್ದಲ್ಲಿ ವಿಶೇಷ ಅಧಿಕಾರಿಗಳು ತಿರಸ್ಕರಿಸುತ್ತಾರೆ. ಜತೆಗೆ, ಅಪಘಾತ ನಡೆದ ರಸ್ತೆಯಲ್ಲಿ ಮುನ್ನೆಚ್ಚರಿಕೆ ಮತ್ತು ಜಾಗೃತಿ ಫಲಕಗಳನ್ನು ಅಳವಡಿಸಿಯೂ ಅಪಘಾತ ಸಂಭವಿಸಿದ್ದರೆ, ಅಂಥ ಸಂತ್ರಸ್ತರಿಗೆ ಪರಿಹಾರ ನೀಡುವುದಕ್ಕೆ ಬಿಬಿಎಂಪಿ ಸಹ ನಿರಾಕರಿಸುವ ಅವಕಾಶವಿರುತ್ತದೆ. ಕಳಪೆ ರಸ್ತೆ ಮತ್ತು ಗುಂಡಿಗಳಿಂದಾಗಿ ಅಪಘಾತ ನಡೆದಿದೆ ಎಂಬುದರ ಬಗ್ಗೆ ನೇರ ಸಾಕ್ಷಿ, ದಾಖಲೆ ಅಥವಾ ಸಿಸಿ ಕ್ಯಾಮರಾ ದೃಶ್ಯಾವಳಿ ನೀಡಬೇಕು.

## ಯಾವುದಕ್ಕೆ ಎಷ್ಟು ಪರಿಹಾರ?

| ಗಾಯದ ವಿಧ | ಪರಿಹಾರ ಮೊತ್ತ |
|---|---|
| ಸಣ್ಣ ಪ್ರಮಾಣದ ಗಾಯ | ₹5 ಸಾವಿರ |
| ಮಧ್ಯಂತರದ ಗಾಯ | ₹10 ಸಾವಿರ |
| ಮೂರ್ನಾಲ್ಕು ದಿನ ಚಿಕಿತ್ಸೆಗೆ | ₹10 ಸಾವಿರ |
| ಗಂಭೀರ ಪ್ರಮಾಣದ ಗಾಯ | ₹15 ಸಾವಿರ |
| ಮೃತಪಟ್ಟರೆ | ₹3 ಲಕ್ಷ |

ವಿಜಯವಾಣಿ
ಕನ್ನಡಿಗರ ಧ್ವನಿ

| Date | 08-12-2020 |
| --- | --- |
| Page No | 3 |

# ಸೋಮವಾರ 501 ಕೇಸ್

**ಬೆಂಗಳೂರು:** ರಾಜಧಾನಿಯಲ್ಲಿ ಸೋಮವಾರ 501 ಹೊಸ ಕೋವಿಡ್ ಪ್ರಕರಣ ಪತ್ತೆಯಾಗುವ ಮೂಲಕ ಒಟ್ಟು ಸೋಂಕಿತರ ಸಂಖ್ಯೆ 3,74,525ಕ್ಕೆ ಏರಿಕೆಯಾಗಿದೆ. ಮತ್ತೊಂದೆಡೆ 861 ಮಂದಿ ಸೋಂಕುಮುಕ್ತ ರಾಗಿದ್ದು, ಒಟ್ಟು ಗುಣಮುಖರ ಸಂಖ್ಯೆ 3,51,065ಕ್ಕೆ ತಲುಪಿದೆ. ಸೋಮವಾರ ಕರೊನಾಗೆ 7 ಮಂದಿ ಬಲಿಯಾಗಿದ್ದು, ಒಟ್ಟು ಮೃತರ ಸಂಖ್ಯೆ 4,190ಕ್ಕೇರಿದೆ.

» **501 ಹೊಸ ಪ್ರಕರಣ, 7 ಸಾವು**

ವಿಜಯವಾಣಿ
ಕನ್ನಡಿಗರ ಧ್ವನಿ



| Date | 08-12-2020 |
| --- | --- |
| Page No | 3 |



# ಬಿಬಿಎಂಪಿ ಕಾಯ್ದೆ ರಚನಾ ವರದಿ ಸಲ್ಲಿಕೆ

**ಬೆಂಗಳೂರು:** ಬಿಬಿಎಂಪಿಗೆ ಸರ್ಕಾರ ಹೊಸ ಕಾಯ್ದೆ ರಚನೆ ಕುರಿತು ಜಂಟಿ ಸದನ ಸಮಿತಿಯು ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಈ ವರದಿಯಲ್ಲಿ ಮೇಯರ್ ಅಧಿಕಾರ 30 ತಿಂಗಳು, ಚೀಫ್ ಕಮಿಷನರ್ ಹಾಗೂ ಸ್ಥಾಯಿ ಸಮಿತಿಗೆ 15 ಸದಸ್ಯರನ್ನು ನೇಮಕ ಮಾಡುವಂತೆ ವಿಶೇಷ ಬದಲಾವಣೆ ಮಾಡಲಾಗಿದೆ. ಈಗ ವರದಿಯನ್ನು ಕಾನೂನು ಸಚಿವರ ನೇತೃತ್ವದ ಸಮಿತಿಯು ಪರಿಶೀಲನೆ ನಡೆಸಿ, ಸರ್ಕಾರದ ಎರಡೂ ಸದನಗಳ ಮುಂದೆ ಅಂಗೀಕಾರಕ್ಕೆ ತರಲಿದೆ.

ವಿಜಯವಾಣಿ
ಕನ್ನಡಿಗರ ಧ್ವನಿ

| Date | 08-12-2020 |
| --- | --- |
| Page No | 5 |

# ವಾರದೊಳಗೆ ತೆರಿಗೆ ಹಣ ವಸೂಲಿ ಮಾಡಿ

**ಬೆಂಗಳೂರು:** ಕೋವಿಡ್ ಜಾಗೃತಿ ಫಲಕಗಳಲ್ಲಿ ಖಾಸಗಿ ಜಾಹೀರಾತು ಅಳವಡಿಸಿದ ಹಿನ್ನೆಲೆಯಲ್ಲಿ ಪಾಲಿಕೆಗೆ ಬರಬೇಕಿರುವ ಅಂದಾಜು 18 ಲಕ್ಷ ರೂ. ತೆರಿಗೆ ಹಣವನ್ನು ಸಂಬಂಧಪಟ್ಟ ಖಾಸಗಿ ಸಂಸ್ಥೆಗಳಿಂದ ವಾರದೊಳಗೆ ವಸೂಲಿ ಮಾಡಬೇಕು. ಇಲ್ಲವಾದರೆ ಆ ಮೊತ್ತವನ್ನು ಸರ್ಕಾರವೇ ಬಿಬಿಎಂಪಿಗೆ ಪಾವತಿಸಬೇಕಾಗುತ್ತದೆ ಎಂದು ಹೈಕೋರ್ಟ್ ಎಚ್ಚರಿಕೆ ನೀಡಿದೆ.



ಕೋವಿಡ್ ಜಾಗೃತಿ ಜಾಹೀರಾತು ಫಲಕ ಅಳವಡಿಸಲು ಅನುಮತಿ ನೀಡುವ ವೇಳೆ ಹೈಕೋರ್ಟ್ ವಿಧಿಸಿದ್ದ ಷರತ್ತುಗಳನ್ನು ಸರ್ಕಾರ ಉಲ್ಲಂಘಿಸಿದೆ ಎಂದು ಆರೋಪಿಸಿ ವಕೀಲ ಜಿ.ಆರ್. ಮೋಹನ್ ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ಸಿಜೆ ಎ.ಎಸ್. ಓಕ್ ನೇತೃತ್ವದ ವಿಭಾಗೀಯ ಪೀಠ ಸೋಮವಾರ ವಿಚಾರಣೆ ನಡೆಸಿತು.

ಜಾಹೀರಾತು ಪ್ರದರ್ಶಿಸಿದ ಸಂಸ್ಥೆಗಳಿಂದ ಪಾಲಿಕೆಗೆ ಬೇರಬೇಕಿದ್ದ ಒಟ್ಟು 18,04,638 ರೂ. ತೆರಿಗೆ ಹಣವನ್ನು ವಸೂಲಿ ಮಾಡಿ ಬಿಬಿಎಂಪಿಗೆ ಪಾವತಿಸಬೇಕು ಹಾಗೂ ಜಾಹೀರಾತು ಅಳವಡಿಸಲು ಖಾಸಗಿ ಸಂಸ್ಥೆಗಳಿಗೆ ಅನುಮತಿ ನೀಡಿದ್ದ ಅಧಿಕಾರಿ ವಿರುದ್ಧ ವಿಚಾರಣೆ ನಡೆಸಿ ವರದಿ ಸಲ್ಲಿಸುವಂತೆ ಈ ಹಿಂದೆ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿತ್ತು. ವಾರದೊಳಗೆ ತೆರಿಗೆ ವಸೂಲಿ ಮಾಡದಿದ್ದರೆ, ಆ ಮೊತ್ತವನ್ನು ಸರ್ಕಾರವೇ ಬಿಬಿಎಂಪಿಗೆ ಪಾವತಿಸಬೇಕು ಎಂದು ಎಚ್ಚರಿಕೆ ನೀಡಿ ವಿಚಾರಣೆಯನ್ನು ಡಿ.15ಕ್ಕೆ ಮುಂದೂಡಿತು.

## ಶಬ್ದಮಾಲಿನ್ಯ ನಿಯಂತ್ರಿಸಿ

**ಬೆಂಗಳೂರು:** ನಗರದಲ್ಲಿ ಹೆಚ್ಚುತ್ತಿರುವ ಶಬ್ದಮಾಲಿನ್ಯ ನಿಯಂತ್ರಿಸಲು ಕೋರಿ ಸಲ್ಲಿಕೆಯಾಗಿರುವ ಪಿಐಎಲ್ ಸಂಬಂಧ ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್ ಜಾರಿಗೊಳಿಸಿದೆ. ಶೇಷಾದ್ರಿಪುರದ ಗಿರೀಶ್ ಭಾರದ್ವಾಜ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಿಜೆ ಎ.ಎಸ್. ಓಕ್ ನೇತೃತ್ವದ ವಿಭಾಗೀಯ ಪೀಠ ಸೋಮವಾರ ವಿಚಾರಣೆ ನಡೆಸಿತು. ಸರ್ಕಾರದ ಮುಖ್ಯ ಕಾರ್ಯದರ್ಶಿ, ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಪೊಲೀಸ್ ಮಹಾನಿರ್ದೇಶಕರು, ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಹಾಗೂ ಪೊಲೀಸ್ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಿದ ಪೀಠ, ಆಕ್ಷೇಪಣೆ ಸಲ್ಲಿಸಲು ಸೂಚಿಸಿ ಜ.11ಕ್ಕೆ ವಿಚಾರಣೆ ಮುಂದೂಡಿತು. ರಾಜಕೀಯ ಪಕ್ಷಗಳು, ಧಾರ್ಮಿಕ ಕೇಂದ್ರಗಳು ಅತಿಹೆಚ್ಚು ಶಬ್ದ ಹೊರಸೂಸುವ ಧ್ವನಿವರ್ಧಕ ಬಳಕೆ ಮಾಡುತ್ತಿದ್ದು, ವ್ಯಕ್ತಿಯ ಜೀವಿಸುವ ಹಕ್ಕು ಉಲ್ಲಂಘನೆ ಆಗುತ್ತಿದೆ ಎಂದು ಅರ್ಜಿಯಲ್ಲಿ ದೂರಲಾಗಿದೆ.

» **ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್**

| Date | 08-12-2020 |
| --- | --- |
| Page No | 1 |

# ಸುಪ್ರೀಂ ಅಂಗಳಕ್ಕೆ ಬಿಬಿಎಂಪಿ ಚುನಾವಣೆ

**ಬೆಂಗಳೂರು:** ಬಿಬಿಎಂಪಿಗೆ ಚುನಾವಣೆ ನಡೆಸುವಂತೆ ಹೈಕೋರ್ಟ್ ನೀಡಿರುವ ಆದೇಶ ಪ್ರಶ್ನಿಸಿ ಸುಪ್ರೀಂಕೋರ್ಟ್ ಗೆ ಮೇಲ್ಮನವಿ ಸಲ್ಲಿಸಲು ರಾಜ್ಯ ಸರಕಾರ ನಿರ್ಧರಿಸಿದೆ ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ತಿಳಿಸಿದ್ದಾರೆ.



ವಿಧಾನಸೌಧದಲ್ಲಿ ಮಾತನಾಡಿದ ಅವರು, 'ಕೆಎಂಸಿ ಕಾಯಿದೆ ವ್ಯಾಪ್ತಿಯಿಂದ ಬಿಬಿಎಂಪಿ ಹೊರಗೆ ತಂದು ಪ್ರತ್ಯೇಕ ಕಾಯಿದೆ ರೂಪಿಸಲು ತೀರ್ಮಾನಿಸಲಾಗಿದೆ. 2021ರಲ್ಲಿ ಹೊಸ ಜನಗಣತಿ ಬಂದರೆ ಬೆಂಗಳೂರಿನ ಜನಸಂಖ್ಯೆ ಹೆಚ್ಚಾಗುತ್ತದೆ. ಅದರ ಆಧಾರದ ಮೇಲೆ ಬಿಬಿಎಂಪಿ ಚುನಾವಣೆ ನಡೆಸುವುದು ಮತ್ತಷ್ಟು ವಿಳಂಬ ಆಗಬಹುದು. ಹೀಗಾಗಿ, ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುತ್ತೇವೆ. 198 ವಾರ್ಡ್‌ಗಳಿಗೆ ಚುನಾವಣೆ ಮಾಡಲು ಆಗುವುದಿಲ್ಲ, ವಾರ್ಡ್‌ಗಳನ್ನು 243ಕ್ಕೆ ಹೆಚ್ಚಿಸಿದ ಬಳಿಕ ಚುನಾವಣೆ ನಡೆಸಲು ತೀರ್ಮಾನಿಸಲಾಗಿದೆ' ಎಂದು ಹೇಳಿದರು.

ವಿಶ್ವವಾಣಿ

| Date | 08-12-2020 |
| --- | --- |
| Page No | 3 |

# ಕೋವಿಡ್ ಜಾಹೀರಾತು ಸರಕಾರಕ್ಕೆ ಹೈಕೋರ್ಟ್ ಎಚ್ಚರಿಕೆ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು



ಜಾಹೀರಾತು ಬದಲಿಗೆ ಖಾಸಗಿ ಕಂಪನಿ ಜಾಹೀರಾತಿಗೆ ಅವಕಾಶ ನೀಡಿದ್ದ ಪ್ರಕರಣದಲ್ಲಿ ವಿಧಿಸಿರುವ 18 ಲಕ್ಷ ರು. ತೆರಿಗೆಯನ್ನು ಒಂದು ವಾರದಲ್ಲಿ ವಸೂಲಿ ಮಾಡಬೇಕು. ತಪ್ಪಿದರೆ ಸರಕಾರವೇ ಆ ಮೊತ್ತ ಭರಿಸಬೇಕಾಗುತ್ತದೆ ಎಂದು ಹೈಕೋರ್ಟ್ ಎಚ್ಚರಿಕೆ ನೀಡಿದೆ.

ಕೋವಿಡ್ ಕುರಿತು ಜಾಗೃತಿ ಜಾಹೀರಾತು ಅಳವಡಿಕೆಗೆ ಅನುಮತಿ ನೀಡುವ ವೇಳೆ ಹೈಕೋರ್ಟ್ ವಿಧಿಸಿದ್ದ ಷರತ್ತುಗಳನ್ನು ಸರಕಾರ ಉಲ್ಲಂಘಿಸಿದೆ ಎಂದು ಆರೋಪಿಸಿ ವಕೀಲ ಜಿ.ಆರ್. ಮೋಹನ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಈ ನಿರ್ದೇಶನ ನೀಡಿದೆ.

ಹಿಂದಿನ ವಿಚಾರಣೆ ವೇಳೆ ಕರೋನಾ ಜಾಗೃತಿ ಹೆಸರಲ್ಲಿ ಖಾಸಗಿ ಜಾಹೀರಾತು ಅಳವಡಿಸಿದ್ದನ್ನು ಗಮನಿಸಿದ್ದ ಪೀಠ, ಸರಕಾರಕ್ಕೆ ನೀಡಿದ್ದ ಅನುಮತಿ ಹಿಂಪಡೆದಿತ್ತು. ಜತೆಗೆ ಖಾಸಗಿ ಜಾಹೀರಾತುಗಳಿದ್ದ ಫಲಕಗಳನ್ನು ಶೀಘ್ರ ತೆರವುಗೊಳಿಸಬೇಕು. ನಗರ ವ್ಯಾಪ್ತಿಯಲ್ಲಿ ಜಾಹೀರಾತು ಫಲಕ ಪ್ರದರ್ಶಿಸಿದ್ದರಿಂದ ಬಿಬಿಎಂಪಿಗೆ 18,04,638 ರುಪಾಯಿ ತೆರಿಗೆ ಹಣವನ್ನು ವಸೂಲಿ ಮಾಡಿ ಪಾಲಿಕೆಗೆ ಪಾವತಿಸುವಂತೆ ಸರಕಾರಕ್ಕೆ ನಿರ್ದೇಶಿಸಿತ್ತು.

ಸೋಮವಾರ ನಡೆದ ವಿಚಾರಣೆ ವೇಳೆ ಸರಕಾರ ಅನುಪಾಲನಾ ವರದಿ ಸಲ್ಲಿಸಲಿಲ್ಲ. ಇದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಪೀಠ, ರಾಜ್ಯ ಸರಕಾರ ನ್ಯಾಯಾಲಯದ ಯಾವುದೇ ನಿರ್ದೇಶನ ಪಾಲಿಸಿಲ್ಲ, ನ್ಯಾಯಾಲಯದ ಅನುಮತಿ ದುರ್ಬಳಕೆ ಮಾಡಿಕೊಂಡಿರುವ ಆರೋಗ್ಯ ಇಲಾಖೆ ಅಧಿಕಾರಿಗಳ ವಿರುದ್ಧ ವಿಚಾರಣೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಿಲ್ಲ, ಬಿಬಿಎಂಪಿಗೆ ಖಾಸಗಿ ಕಂಪನಿಗಳಿಂದ ಬರಬೇಕಿದ್ದ 18 ಲಕ್ಷ ರು. ತೆರಿಗೆ ಹಣವನ್ನೂ ವಸೂಲಿ ಮಾಡಿಲ್ಲ ಎಂದಿತು.

ಅಲ್ಲದೆ ಖಾಸಗಿ ಕಂಪನಿಗಳಿಂದ ಪಾಲಿಕೆಗೆ ಬರಬೇಕಿರುವ ಒಟ್ಟು 18 ಲಕ್ಷ ರು. ತೆರಿಗೆ ಹಣವನ್ನು ಒಂದು ವಾರದೊಳಗೆ ಸಂಬಂಧಪಟ್ಟವರಿಂದ ವಸೂಲಿ ಮಾಡಿ ಪಾಲಿಕೆಗೆ ನೀಡಬೇಕು. ಇಲ್ಲದಿದ್ದರೆ ಆ ಮೊತ್ತವನ್ನು ಸರಕಾರವೇ ಪಾವತಿಸಬೇಕು. ಹಾಗೆಯೇ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡ ವರದಿ ಸಲ್ಲಿಸಬೇಕು ಎಂದು ನಿರ್ದೇಶಿಸಿ ವಿಚಾರಣೆಯನ್ನು ಡಿ. 15ಕ್ಕೆ ಮುಂದೂಡಿತು.

ಉದಯವಾಣಿ
ಜನಮನದ ಜೀವನಾಡಿ

| Date | 08-12-2020 |
| --- | --- |
| Page No | 2 |

# ದಂಡದ ಮೊತ್ತ ವಾರದಲ್ಲಿ ಪಾವತಿಸಿ

## 18 ಲಕ್ಷ ತೆರಿಗೆ ಹಣ ಪಾವತಿಗೆ ಸರ್ಕಾರಕ್ಕೆ ಕೋರ್ಟ್ ನಿರ್ದೇಶನ

**ಬೆಂಗಳೂರು:** ಕೋವಿಡ್ ಜಾಗೃತಿ ಕುರಿತು ಜಾಹೀರಾತು ಫಲಕ ಅಳವಡಿಕೆ ಸಂಬಂಧ ಖಾಸಗಿ ಕಂಪನಿಗಳಿಂದ ಬಿಬಿಎಂಪಿಗೆ ಬರಬೇಕಿರುವ ಒಟ್ಟು 18 ಲಕ್ಷ ತೆರಿಗೆ ಹಣವನ್ನು ಒಂದು ವಾರದಲ್ಲಿ ವಸೂಲಿ ಮಾಡಿ ಪಾಲಿಕೆಗೆ ಪಾವತಿಸಬೇಕು ಎಂದು ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಕೋವಿಡ್ ಜಾಗೃತಿ ಜಾಹೀರಾತು ಫಲಕ ಅಳವಡಿಸಲು ಅನುಮತಿ ನೀಡುವ ವೇಳೆ ಹೈಕೋರ್ಟ್ ವಿಧಿಸಿದ್ದ ಷರತ್ತುಗಳನ್ನು ಸರ್ಕಾರ ಉಲ್ಲಂಘಿಸಿದೆ ಎಂದು ಆರೋಪಿಸಿ ವಕೀಲ ಜಿ.ಆರ್. ಮೋಹನ್ ಸಲ್ಲಿಸಿದ್ದ ಮಧ್ಯಂತರ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾ. ಎ.ಎಸ್.ಓಕ್ ಅವರ ನೇತೃತ್ವದ ವಿಭಾಗೀಯ ನ್ಯಾಯಪೀಠ, ಪಾಲಿಕೆಗೆ ಬರಬೇಕಾದ ದಂಡದ ಮೊತ್ತವನ್ನು ಸಂಬಂಧಪಟ್ಟವರಿಂದ ವಸೂಲಿ ಮಾಡಿ ಪಾಲಿಕೆಗೆ ಪಾವತಿಸಬೇಕು. ಇಲ್ಲದಿದ್ದರೆ ಆ ಮೊತ್ತವನ್ನು ಸರ್ಕಾರವೇ ಭರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದೆ.



ಅರ್ಜಿಯ ಕಳೆದ ವಿಚಾರಣೆ ವೇಳೆ ಕೊರೊನಾ ಜಾಗೃತಿಯ ಹೆಸರಿನಲ್ಲಿ ಖಾಸಗಿ ಜಾಹೀರಾತು ಅಳವಡಿಸಲಾಗಿತ್ತು. ಇದರಿಂದ ಕೊರೊನಾ ಜಾಗೃತಿಯ ಹೋರ್ಡಿಂಗ್ಸ್ ಅಳವಡಿಸಲು ಸರ್ಕಾರಕ್ಕೆ ನೀಡಿದ್ದ ಅನುಮತಿಯನ್ನು ಹೈಕೋರ್ಟ್ ಹಿಂಪಡೆದಿತ್ತು. ಜತೆಗೆ, ಖಾಸಗಿ ಜಾಹೀರಾತುಗಳಿದ್ದ ಫಲಕಗಳನ್ನು ಶೀಘ್ರ ತೆರವುಗೊಳಿಸಬೇಕೆಂದು ತಿಳಿಸಿತ್ತು. ಫಲಕ ಸಂಬಂಧ ಪಾಲಿಕೆಗೆ ಬರಬೇಕಿದ್ದ ಒಟ್ಟು 18,04,638 ರೂ. ತೆರಿಗೆ ಹಣವನ್ನು ವಸೂಲಿ ಮಾಡಿ ಬಿಬಿಎಂಪಿಗೆ ಪಾವತಿಸುವಂತೆ ಸರ್ಕಾರಕ್ಕೆ ನಿರ್ದೇಶಿಸಿತ್ತು.

ಆದರೆ, ಸೋಮವಾರ ಅರ್ಜಿ ವಿಚಾರಣೆಗೆ ಬಂದಾಗ ನ್ಯಾಯಾಲಯದ ಆದೇಶ ಪಾಲಿಸಿ ಪ್ರಮಾಣಪತ್ರ ಸಲ್ಲಿಸಲು ಸರ್ಕಾರ ವಿಫಲವಾಯಿತು. ಇದಕ್ಕೆ ಅಸಮಾಧಾನಗೊಂಡ ನ್ಯಾಯಪೀಠ, ಕೋರ್ಟ್ ಷರತ್ತು ಉಲ್ಲಂಘಿಸಿ ಜಾಹೀರಾತು ಅಳವಡಿಸಲು ಖಾಸಗಿಯವರಿಗೆ ಅನುಮತಿ ನೀಡಿದ ಅಧಿಕಾರಿಗಳ ವಿರುದ್ಧ ಹಿರಿಯ ಅಧಿಕಾರಿಯಿಂದ ವಿಚಾರಣೆ ನಡೆಸಿಲ್ಲ, ತಪ್ಪಿತಸ್ಥರು ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಂಡು ವರದಿ ಸಲ್ಲಿಸಿಲ್ಲ, ಬಿಬಿಎಂಪಿಗೆ ಖಾಸಗಿ ಕಂಪನಿಗಳಿಗೆ ಬರಬೇಕಿದ್ದ 18 ಲಕ್ಷ ತೆರಿಗೆ ಹಣವನ್ನೂ ವಸೂಲಿ ಮಾಡಿಲ್ಲ ಎಂದು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿತು.

ನಂತರ ಖಾಸಗಿ ಕಂಪನಿಗಳಿಂದ ಪಾಲಿಕೆಗೆ ಬರಬೇಕಿರುವ ಒಟ್ಟು 18 ಲಕ್ಷ ತೆರಿಗೆ ಹಣವನ್ನು ಒಂದು ವಾರದೊಳಗೆ ಸಂಬಂಧಪಟ್ಟವರಿಂದ ವಸೂಲಿ ಮಾಡಿ ಪಾವತಿಸಬೇಕು. ಹಾಗೆಯೇ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡ ವರದಿಯನ್ನೂ ಡಿ.15ರೊಳಗೆ ಸಲ್ಲಿಸಲು ನಿರ್ದೇಶನ ನೀಡಿ ವಿಚಾರಣೆ ಮುಂದೂಡಿತು.

ಉದಯವಾಣಿ
ಜನಮನದ ಜೀವನಾಡಿ

| Date | 08-12-2020 |
|---|---|
| Page No | 2 |

ಸುಪ್ರೀಂಗೆ ಮೇಲ್ಮನವಿ ಸಲ್ಲಿಸಲು ರಾಜ್ಯ ಸರ್ಕಾರ ನಿರ್ಧಾರ | ಕೆಎಂಸಿ ಕಾಯ್ದೆ ವ್ಯಾಪ್ತಿಯಿಂದ ಪಾಲಿಕೆ ಹೊರ ತಂದು ಪ್ರತ್ಯೇಕ ಕಾಯ್ದೆ

# ಪಾಲಿಕೆ ಚುನಾವಣೆ ಮುಂದೂಡಲು ಹೊಸ ಕಾಯ್ದೆ

**ಬೆಂಗಳೂರು:** ಬಿಬಿಎಂಪಿಗೆ ಚುನಾವಣೆ ನಡೆಸುವಂತೆ ಹೈ ಕೋರ್ಟ್ ನೀಡಿರುವ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ರಾಜ್ಯ ಸರ್ಕಾರ ನಿರ್ಧರಿಸಿದ್ದು ಜತೆಗೆ ಬಿಬಿಎಂಪಿ ಕಾಯ್ದೆ-2020 ತರಲು ತೀರ್ಮಾನಿಸಿದೆ.

ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ನೇತೃತ್ವದಲ್ಲಿ ಸೋಮವಾರ ವಿಧಾನಸೌಧದಲ್ಲಿ ಸಭೆ ನಡೆಸಿ, ಬಿಬಿಎಂಪಿಗೆ ಪ್ರತ್ಯೇಕ ಕಾಯ್ದೆ ತರಲು ತೀರ್ಮಾನಿಸಲಾಗಿದೆ. ಕರ್ನಾಟಕ ಮುನಿಸಿಪಲ್ ಆಕ್ಟ್ (ಕೆಎಂಸಿ ಕಾಯ್ದೆ) ವ್ಯಾಪ್ತಿಯಿಂದ ಬಿಬಿಎಂಪಿಯನ್ನು ಹೊರಗೆ ತಂದು ಪ್ರತ್ಯೇಕ ಕಾಯ್ದೆ ತರಲು ಸಭೆಯಲ್ಲಿ ನಿರ್ಧರಿಸಲಾಯಿತು.

ಸಭೆಯ ನಂತರ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ, 2021ರಲ್ಲಿ ಹೊಸ ಜನಗಣತಿ ಬಂದರೆ ಬೆಂಗಳೂರಿನ ಜನಸಂಖ್ಯೆ ಹೆಚ್ಚಾಗುತ್ತದೆ. ಅದರ ಆಧಾರದ ಮೇಲೆ ಬಿಬಿಎಂಪಿ ಚುನಾವಣೆ ನಡೆಸುವುದು ಮತ್ತಷ್ಟು ವಿಳಂಬ ಆಗಬಹುದು. ಹಾಗಾಗೀ ಸುಪ್ರೀಂ ಮೇಲ್ಮನವಿ ಸಲ್ಲಿಕೆ ಮಾಡುತ್ತೇವೆ ಎಂದು ಹೇಳಿದರು.



ನಮಗೂ ಚುನಾವಣೆ ಮಾಡಬೇಕು ಅಂತ ಇದೆ. ಆದರೆ, 198ವಾರ್ಡ್ ಗೆ ಚುನಾವಣೆ ಮಾಡಲು ಆಗುವುದಿಲ್ಲ ಅಂತ. ಮುಂಚಿತವಾಗಿಯೇ ವಾರ್ಡ್ ಮರುವಿಂಗಡನೆ ಮಾಡಿದ್ದೆವು. ಈಗಿರುವ 198 ವಾರ್ಡ್ ಗಳನ್ನು 243 ವಾರ್ಡ್ ಗೆ ಹೆಚ್ಚಿಸಿ ಪುನರ್ ವಿಂಗಡನೆ ಮಾಡಿದ ಬಳಿಕ ಚುನಾವಣೆ ನಡೆಸಲು ಸಭೆಯಲ್ಲಿ ತೀರ್ಮಾನ ಮಾಡಲಾಗಿದೆ. ಎಲ್ಲಾ ಪಕ್ಷದವರು ಕೂಡ ಇದಕ್ಕೆ ಒಪ್ಪಿಗೆ ಸೂಚಿಸಿದ್ದಾರೆ. ಹೀಗಾಗಿ ಇದೇ ಅಧಿವೇಶನದಲ್ಲಿ ಬಿಬಿಎಂಪಿ ಬಿಲ್ ಮಂಡನೆ ಮಾಡಲು ಸರ್ಕಾರ ತೀರ್ಮಾನ ಮಾಡಲಾಗಿದೆ. ನೂತನ ಕಾಯ್ದೆ ಅನ್ವಯ ಸುಪ್ರೀಂ ಕೋರ್ಟ್ ಮೆಟ್ಟಿಲೇರಲು ನಿರ್ಧಾರ ಮಾಡಲಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಬಿಬಿಎಂಪಿ ಜಂಟಿ ಪರಿಶೀಲನೆ ಸಮಿತಿ ಸಭೆಯ ಅಧ್ಯಕ್ಷ ಎಸ್. ರಘು, ಸತೀಶ್ ರೆಡ್ಡಿ ಎಸ್. ಆರ್. ವಿಶ್ವನಾಥ್, ಬಿಬಿಎಂಪಿ ಆಯುಕ್ತ ಮಂಜುನಾಥ್ ಪ್ರಸಾದ್, ರಾಮಲಿಂಗ ರೆಡ್ಡಿ, ಮುನಿರತ್ನ ಅರವಿಂದ ಲಿಂಬಾವಳಿ ಭಾಗಿಯಾಗಿದ್ದರು.

## ನ್ಯಾಯಾಂಗದ ಜತೆ ಶಾಸಕಾಂಗ ಸಂಘರ್ಷ?

ಜಂಟಿ ಪರಿಶೀಲನೆ ಸಭೆಯಲ್ಲಿ ಬಿಬಿಎಂಪಿ ಕಾಯ್ದೆ-2020ಗೆ ಒಪ್ಪಿಗೆ ಪಡೆದಿದ್ದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ನೇತೃತ್ವದ ಸಮಿತಿಗೆ ನೀಡಲಾಗಿದೆ. ಕಾನೂನು ತಜ್ಞರ ಸಲಹೆ ಪಡೆದ ನಂತರ ಇದೇ ಅಧಿವೇಶನದಲ್ಲಿ ವಿಧೇಯಕ ಮಂಡಿಸಿ ಅಂಗೀಕಾರ ಪಡೆಯಲು ತೀರ್ಮಾನಿಸಲಾಗಿದೆ. ಆ ನಂತರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವ ವೇಳೆ ಮಾಹಿತಿ ನೀಡಲು ನಿರ್ಧರಿಸಲಾಗಿದೆ. ಹೈಕೋರ್ಟ್ ಈಗಾಗಲೇ ನಾಲ್ಕು ವಾರಗಳಲ್ಲಿ ಮೀಸಲಾತಿ ಪ್ರಕಟಿಸಿ ಆರು ವಾರಗಳಲ್ಲಿ ಚುನಾವಣೆ ನಡೆಸಲು ಸೂಚಿಸಿದ್ದರೂ ರಾಜ್ಯ ಸರ್ಕಾರ ಅದನ್ನು ಪಾಲಿಸದೆ ಸುಪ್ರೀಂಕೋರ್ಟ್ ಮೊರೆ ಹೋಗಲು ಮುಂದಾಗಿರುವುದು ನ್ಯಾಯಾಂಗದ ಜತೆ ಸಂಘರ್ಷಕ್ಕೆ ಇಳಿದಂತೆ ಎಂಬ ಮಾತುಗಳು ಕೇಳಿಬರುತ್ತಿವೆ. 198 ವಾರ್ಡ್‌ಗಳಿಗೆ ಸೀಮಿತವಾಗಿ ಚುನಾವಣೆ ನಡೆಸಿ ವಾರ್ಡ್ ಹೆಚ್ಚಳ ಆನಂತರ ಮಾಡಿ ಎಂದು ನ್ಯಾಯಾಲಯ ಹೇಳಿದ್ದರೂ ಹೇಗಾದರೂ ಮಾಡಿ ಚುನಾವಣೆ ಮುಂದೂಡಲು ಬಿಬಿಎಂಪಿ ಕಾಯ್ದೆ-2020 ತರಲು ನಿರ್ಧರಿಸಿದೆ. ಹೈಕೋರ್ಟ್ ಆದೇಶ ಪಾಲನೆ ಮಾಡದಿದ್ದರೆ ನ್ಯಾಯಾಂಗ ಉಲ್ಲಂಘನೆಯಾಗಲಿದೆ. ಸುಪ್ರೀಂ ಕೋರ್ಟ್‌ನಲ್ಲೂ ಹಿನ್ನಡೆಯಾದರೆ ಸರ್ಕಾರ ಇಕ್ಕಟ್ಟಿಗೆ ಸಿಲುಕಲಿದೆ ಎಂದು ಹೇಳಲಾಗುತ್ತಿದೆ.

ಉದಯವಾಣಿ
ಜನಮನದ ಜೀವನಾಡಿ

| Date | 08-12-2020 |
| --- | --- |
| Page No | 3 |


# ತ್ಯಾಜ್ಯ ದಂಡಕ್ಕೂ ಕ್ಯಾರೇ ಎನ್ನದ ಜನ

## ಕೋಟಿ ಕೋಟಿ ದಂಡ ಸಂಗ್ರಹವಾದರೂ ವಿಲೇವಾರಿ ವ್ಯವಸ್ಥೆಯಲ್ಲಿ ಗೋಚರಿಸದ ಬದಲಾವಣೆ

• ಹಿತೇಶ್ ವೈ.

**ಬೆಂಗಳೂರು:** ನಗರದಲ್ಲಿ ಕಸ ನಿಯಮ ಉಲ್ಲಂಘನೆ ಮಾಡುತ್ತಿರುವವರ ಮೇಲೆ ಪಾಲಿಕೆ ಬಳಸುತ್ತಿರುವ ದಂಡ ಅಸ್ತ್ರ ಪ್ರಯೋಗಕ್ಕೂ ಸಾರ್ವಜನಿಕರು ಮಣಿಯುತ್ತಿಲ್ಲ.

ದಂಡ ವಿಧಿಸಲು ಪ್ರಾರಂಭಿಸಿದ ಮೇಲೆ ನಿಯಮ ಉಲ್ಲಂಘನೆ ಪ್ರಕರಣಗಳ ಸಂಖ್ಯೆ ಇಳಿ ಮುಖವಾಗಬೇಕಿತ್ತು. ಆದರೆ, ನಿಯಮ ಉಲ್ಲಂಘನೆ ಮಾಡುವವರ ಸಂಖ್ಯೆಯಲ್ಲಿ ಯಾವುದೇ ವ್ಯತ್ಯಾಸ ಆಗಿಲ್ಲ. ಅಲ್ಲದೆ, ದಿನದಿಂದ ದಿನಕ್ಕೆ ನಿಯಮ ಉಲ್ಲಂಘನೆ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಲೇ ಇದೆ.

2019ರ ಸೆ.ತಿಂಗಳಿನಿಂದ ಮಾರ್ಷಲ್‌ಗಳ ಮೂಲಕ ದಂಡ ವಿಧಿಸಲಾಗುತ್ತಿದೆ. ಈ ಒಂದು ವರ್ಷದ ಅವಧಿಯಲ್ಲಿ ಕಸ ವಿಂಗಡಣೆ ಲೋಪ ಮತ್ತು ಎಲ್ಲೆಂದರಲ್ಲಿ ಕಸ ಎಸೆಯುವುದು ಸೇರಿದಂತೆ ಒಟ್ಟು 32,517 ಸಾವಿರ ನಿಯಮ ಉಲ್ಲಂಘನೆ ಪ್ರಕರಣಗಳು ವರದಿಯಾಗಿವೆ. ನಿಯಮ ಉಲ್ಲಂಘನೆ ಮಾಡಿದವರಿಂದ ಒಟ್ಟು 2.38 ಕೋಟಿ (2,38,84,193.5) ರೂ. ಸಂಗ್ರಹವಾಗಿದೆ.

ನಿಯಮ ಉಲ್ಲಂಘಿಸುವವರ ಮೇಲೆ ಪಾಲಿಕೆ ದಂಡ ವಿಧಿಸುತ್ತಿದ್ದರೂ, ಕೆಲವು ನಿರ್ದಿಷ್ಟ ಭಾಗದಲ್ಲಿ ಯಾವುದೇ ಬದಲಾವಣೆಗಳು ಆಗಿಲ್ಲ. ಸಾರ್ವಜನಿಕರು ನಿಯಮ ಉಲ್ಲಂಘನೆ ಮಾಡುತ್ತಿದ್ದಾರೆ ಎನ್ನುವುದು ಒಂದು ಕಡೆಯಾದರೆ ಇದೇ ಸಂದರ್ಭದಲ್ಲಿ ಪಾಲಿಕೆ ಕಸದ ಡಬ್ಬಿ ಇರಿಸುವುದು, ಕಸ ಸಂಗ್ರಹ ವೇಳಾಪಟ್ಟಿ ಮತ್ತಷ್ಟು ಜನ ಸ್ನೇಹಿ ಮಾಡಿಕೊಳ್ಳುವುದು ಮಾಡಿಲ್ಲ. ಹೀಗಾಗಿ, ನಿಯಮ ಉಲ್ಲಂಘನೆ ಪ್ರಕರಣಗಳು ಮುಂದುವರಿಯುತ್ತಲೇ ಇವೆ.

**ಕಸ ನಿಯಮ ಉಲ್ಲಂಘನೆ ಮಾಡಿರುವ 25 ಸಾವಿರ ಜನ:** ನಗರದಲ್ಲಿ ಕಸ ನಿಯಮ ಉಲ್ಲಂಘನೆ ಮಾಡುವವರ ಸಂಖ್ಯೆಯೇ ಅಧಿಕವಾಗಿದೆ. ಮಾರ್ಷಲ್‌ಗಳು ದಂಡ ವಿಧಿಸಲು ಪ್ರಾರಂಭಿಸಿದಾಗಿನಿಂದ ಡಿ.6ರ ವರೆಗೆ 24,919 ಜನ ಕಸ ನಿಯಮ ಉಲ್ಲಂಘನೆ ಮಾಡಿರುವುದು ವರದಿಯಾಗಿದೆ.

ನಗರದಲ್ಲಿ ಎಲ್ಲೆಂದರಲ್ಲಿ ಕಸ ಎಸೆಯುವವರು, ಪ್ಲಾಸ್ಟಿಕ್ ಬಳಕೆ, ಸಾರ್ವಜನಿಕ ಸ್ಥಳಗಳಲ್ಲಿ ಮೂತ್ರವಿಸರ್ಜನೆ ಹಾಗೂ ಧೂಮಪಾನ ಸೇರಿದಂತೆ ಕಸ ನಿರ್ವಹಣೆಯಲ್ಲಿ ನಿಯಮ ಉಲ್ಲಂಘನೆ ಮಾಡುವವರ ಮೇಲೆ ಮಾರ್ಷಲ್‌ಗಳ ಮೂಲಕ ಪಾಲಿಕೆ ಕಳೆದ ಸೆ.ನಿಂದ ದಂಡ ವಿಧಿಸುತ್ತಿದೆ.

**ಜನ ಮತ್ತು ವ್ಯವಸ್ಥೆ ಎರಡೂ ಬದಲಾಗಬೇಕು:** ನಗರದಲ್ಲಿ ಕಸ ನಿಯಮ ಉಲ್ಲಂಘನೆ ತಡೆಗೆ ಸಾರ್ವಜನಿಕರು ಬದಲಾಗಬೇಕು. ಇದೇ ಸಂದರ್ಭದಲ್ಲಿ ಪಾಲಿಕೆಯಿಂದಲೂ ನೂತನ ಯೋಜನೆ ರೂಪಿಸಿಕೊಳ್ಳಬೇಕಿದೆ. ಅಲ್ಲಲ್ಲಿ ಕಸದ ಡಬ್ಬಿ, ರಾತ್ರಿ ಪಾಳಿ ಕಸ ಸಂಗ್ರಹ ಮತ್ತು ಕಸದ ಕಿಯೋಸ್ಕ್ ಮಾದರಿ ಅಳವಡಿಸಿಕೊಳ್ಳುವ ಸಂಬಂಧ ಅಭಿಪ್ರಾಯಗಳು ವ್ಯಕ್ತವಾಗುತ್ತಿದೆ ಎನ್ನುತ್ತಾರೆ ಬಿಬಿಎಂಪಿ ವಿಶೇಷ ಆಯುಕ್ತ (ಘನತ್ಯಾಜ್ಯ ನಿರ್ವಹಣೆ) ಡಿ. ರಂದೀಪ್.

ಕಸ ಎಸೆಯುವುದು ಕೆಲವರಿಗೆ ಜೀವನ ಶೈಲಿ ರೀತಿಯೂ ಬದಲಾಗುತ್ತಿದೆ. ಪಾಲಿಕೆಯಿಂದ ಸಾಕಷ್ಟು ಜಾಗೃತಿ ಮೂಡಿಸಿದ್ದೇವೆ. ಪಾಲಿಕೆಯಿಂದಲ್ಲೂ ಮತ್ತಷ್ಟು ಸಿದ್ಧತೆ ಮಾಡಿಕೊಳ್ಳಬೇಕಿದೆ. ರಾತ್ರಿಪಾಳಿ ಕಸ ಸಂಗ್ರಹದಂತಹ ಸಲಹೆಗಳೂ ಕೇಳಿಬಂದಿವೆ. ಈ ನಿಟ್ಟಿನಲ್ಲಿ ಚರ್ಚೆಗಳು ನಡೆಯುತ್ತಿವೆ. ಪಾಲಿಕೆಯೊಂದಿಗೆ ಸಾರ್ವಜನಿಕರೂ ಸಹಕಾರ ನೀಡಬೇಕು ಎಂದರು.

### 2019ರ ಸೆ.ನಿಂದ ಡಿ.6ರ ವರೆಗೆ ನಿಯಮ ಉಲ್ಲಂಘನೆ ಪ್ರಕರಣಗಳಿಂದ ಸಂಗ್ರಹವಾಗಿರುವ ದಂಡ

| ಕಸ | ಪ್ಲಾಸ್ಟಿಕ್ | ಉಗುಳುವುದು | ಮೂತ್ರವಿಸರ್ಜನೆ | ಧೂಮಪಾನ | ಬಹಿಲುಬರ್ಹಿದೆಸೆ | ಇತರೆ |
| --- | --- | --- | --- | --- | --- | --- |
| 1.74 ಕೋಟಿರೂ. | 55.17 ಲಕ್ಷ | 24,450ರೂ. | 27,500ರೂ. | 26,600ರೂ. | 3,300 ರೂ. | 8.54 ಲಕ್ಷ |



### ಯಾವ ವಿಭಾಗದಲ್ಲಿ ನಿಯಮ ಉಲ್ಲಂಘನೆ

ನಗರದಲ್ಲಿ ಸಾರ್ವಜನಿಕ ಪ್ರದೇಶಗಳಲ್ಲಿ ಸ್ವಚ್ಛತೆ ಹಾಳು ಮಾಡುವವರು ಹಾಗೂ ನಿಯಮ ಪಾಲನೆ ಮಾಡದೆ ಇರುವವರ ಮೇಲೆ ದಂಡ ವಿಧಿಸಲಾಗುತ್ತಿದ್ದು, ಕಳೆದ ಸೆ.ನಿಂದ (ಡಿ.6)ರ ವರೆಗೆ ಕಸ ವಿಲೇವಾರಿ ನಿಯಮ ಉಲ್ಲಂಘನೆಯಲ್ಲಿ 24,919 ಪ್ರಕರಣ, ಪ್ಲಾಸ್ಟಿಕ್ ಬಳಕೆ ಮತ್ತು ಮಾರಾಟಕ್ಕೆ ಸಂಬಂಧಿಸಿದಂತೆ 6024 ಎಲ್ಲೆಂದರಲ್ಲಿ ಉಗುಳುವುದು 141, ಸಾರ್ವಜನಿಕ ಸ್ಥಳಗಳಲ್ಲಿ ಮೂತ್ರ ವಿಸರ್ಜನೆ 122, ಧೂಮಪಾನ 36, ಇತರೆ 1,267 ಹಾಗೂ ಬಹಿಲುಬಹಿರ್ದೆಸೆಗೆ ಸಂಬಂಧಿಸಿದಂತೆ 8 ಪ್ರಕರಣಗಳು ಸೇರಿದಂತೆ ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 32,517 ಸಾವಿರ ವಿವಿಧ ನಿಯಮ ಉಲ್ಲಂಘನೆ ಪ್ರಕರಣಗಳಿಗೆ ಮಾರ್ಷಲ್‌ಗಳು ದಂಡ ವಿಧಿಸಿದ್ದಾರೆ.

### ಹೊಸ ವರ್ಷದಿಂದ ಘನತ್ಯಾಜ್ಯ ಸೇವಾ ಶುಲ್ಕ ಅಂತಿಮ ?

ನಗರದಲ್ಲಿ ಮುಂದಿನ ಜನವರಿಯಿಂದ ಮಾಸಿಕ 200 ರೂ. ಘನತ್ಯಾಜ್ಯ ಸೇವಾ ಶುಲ್ಕ ವಿಧಿಸಲು ಪಾಲಿಕೆ ಮುಂದಾಗಿದ್ದು, ಮಾಸಿಕ 200 ರೂ.ಗಿಂತ ಕಡಿಮೆ ವಿದ್ಯುತ್ ಬಿಲ್ ಪಾವತಿದಾರರಿಗೆ ಶೇ.50 ಶುಲ್ಕ ರಿಯಾಯಿತಿ ನೀಡಲು ಉದ್ದೇಶಿಸಿದೆ. ಸಾರ್ವಜನಿಕರು ಸೇರಿದಂತೆ ಹೋಟೆಲ್, ಕಲ್ಯಾಣ ಮಂಟಪ, ಆಸ್ಪತ್ರೆ, ಶಾಪಿಂಗ್ ಮಾಲ್‌ಗಳ ಮಾಲೀಕರಿಗೆ ಪ್ರತಿ ತಿಂಗಳು ಘನತ್ಯಾಜ್ಯ ಸೇವಾ ಶುಲ್ಕ ವಿಧಿಸಲಿದ್ದು, ಬಿಬಿಎಂಪಿಯ ಕಸ ನಿರ್ವಹಣೆ ಉಪ ನಿಯಮ-2020ರ ಅನ್ವಯ ವಸತಿ ಕಟ್ಟಡಗಳಿಂದ ಗರಿಷ್ಠ 200 ರೂ. ಹಾಗೂ ವಾಣಿಜ್ಯ ಬಳಕೆದಾರರಿಂದ 500 ರೂ. ಶುಲ್ಕ ಸಂಗ್ರಹಿಸಲು ತೀರ್ಮಾನಿಸಿದೆ. ಮಾಸಿಕ 200 ರೂ. ವಿದ್ಯುತ್ ಬಿಲ್‌ಗೆ ಶೇ.50 ರಿಯಾಯ್ತಿ ಬಡವರಿಗೆ ಹಾಗೂ ಮಧ್ಯಮ ವರ್ಗದವರಿಗೆ ಹೊರೆಯಾಗಬಾರದೆಂಬ ಕಾರಣಕ್ಕೆ ಮಾಸಿಕ 200 ರೂ. ಗಿಂತ ವಿದ್ಯುತ್ ಬಿಲ್ ಪಾವತಿದಾರರಿಗೆ 100 ರೂ., ಮಾಸಿಕ 500 ರೂ. ಗಿಂತ ಹೆಚ್ಚಿನ ವಿದ್ಯುತ್ ಬಿಲ್ ಪಾವತಿದಾರರಿಗೆ 200 ರೂ. ಶುಲ್ಕ ವಿಧಿಸಲು ಉದ್ದೇಶಿಸಲಾಗಿದೆ. ಈ ರೀತಿ ಕಸ ವಿಲೇವಾರಿಗೆ ಸೇವಾ ಶುಲ್ಕ ವಿಧಿಸುವುದರಿಂದ ಬಿಬಿಎಂಪಿಗೆ ಮಾಸಿಕ 50 ಕೋಟಿ ರೂ. ಸಂಗ್ರಹವಾಗುವ ಗುರಿ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

• ಕಡಿಮೆ ವಿದ್ಯುತ್ ಬಿಲ್ ಪಾವತಿಸುವ ಗ್ರಾಹಕರಿಗೆ ರಿಯಾಯ್ತಿ

ಸಂಯುಕ್ತ ಕರ್ನಾಟಕ

| Date | 08-12-2020 |
|---|---|
| Page No | 1 |

# ಬಿಬಿಎಂಪಿ ಚುನಾವಣೆ ಮುಂದೂಡಿಕೆಗೆ ಮೇಲ್ಮನವಿ

**ಸಂ.ಕ. ಸಮಾಚಾರ ಬೆಂಗಳೂರು**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಚುನಾವಣೆ ನಡೆಸಲು ಹೈಕೋರ್ಟ್ ನೀಡಿರುವ ನಿರ್ದೇಶನವನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.

ಬಿಬಿಎಂಪಿ ಚುನಾವಣೆಗೆ ಸಂಬಂಧಿಸಿದಂತೆ ಬೆಂಗಳೂರಿನ ಸರ್ವಪಕ್ಷಗಳ ಶಾಸಕರ ಜೊತೆ ಸಭೆ ನಡೆಸಿದ ನಂತರ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ಸುದ್ದಿಗಾರರಿಗೆ ವಿವರಿಸಿ, ಶೀಘ್ರದಲ್ಲೇ ಬಿಬಿಎಂಪಿ ಚುನಾವಣೆಯನ್ನು ರಾಜ್ಯ ಸರ್ಕಾರ ನಡೆಸಬೇಕು ಎಂದು ಆದೇಶಿಸಿದೆ. ಆದರೆ, ರಾಜ್ಯದಲ್ಲಿ ಜನ ಗಣತಿ ನಡೆಯುತ್ತಿದ್ದು ಸದ್ಯದಲ್ಲಿ ಚುನಾವಣೆ ನಡೆಸುವುದು ಸಾಧ್ಯವಿಲ್ಲ. ಹೀಗಾಗಿ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದರು.

2021ರಲ್ಲಿ ಹೊಸ ಜನಗಣತಿ ಬಂದರೆ ಬೆಂಗಳೂರಿನ ಜನಸಂಖ್ಯೆ ಹೆಚ್ಚಾಗುತ್ತದೆ. ಅದರ ಆಧಾರದ ಮೇಲೆ ಚುನಾವಣೆ ಮತ್ತಷ್ಟು ವಿಳಂಬ ಆಗಬಹುದು. ಹೀಗಾಗಿ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ



ಸಲ್ಲಿಕೆ ಮಾಡಲಾಗುತ್ತಿದೆ. ನಮಗೂ ಚುನಾವಣೆ ಮಾಡಬೇಕು ಎಂಬ ಉದ್ದೇಶ ಇದೆ. ಆದರೆ, 198 ವಾರ್ಡ್‌ಗೆ ಚುನಾವಣೆ ಮಾಡುವುದಕ್ಕೆ ಆಗುವುದಿಲ್ಲ. ಹೀಗಾಗಿ ಮುಂಚಿತವಾಗಿ ವಾರ್ಡ್‌ಗಳ ಮರುವಿಂಗಡನೆ ಮಾಡಲಾಗಿತ್ತು. 243 ವಾರ್ಡ್ ಪುನರ್ ವಿಂಗಡನೆ ಮಾಡಿದ ಬಳಿಕ ಚುನಾವಣೆ ನಡೆಸಲು ಸಭೆಯಲ್ಲಿ ತೀರ್ಮಾನ ಮಾಡಲಾಗಿದೆ. ಎಲ್ಲಾ ಪಕ್ಷದವರು ಸಹ ಇದಕ್ಕೆ ಒಪ್ಪಿಗೆ ಸೂಚಿಸಿದ್ದಾರೆ. ಹೀಗಾಗಿ ಶೀಘ್ರದಲ್ಲೇ ಈ ಬಗ್ಗೆ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗುವುದು. ಜನಗಣತಿಯ ನಂತರ ಚುನಾವಣೆ ನಡೆಸಲಾಗುವುದು ಎಂದರು.

ಸಂಯುಕ್ತ ಕರ್ನಾಟಕ

| Date | 08-12-2020 |
| --- | --- |
| Page No | 4 |

# ಪಾಲಿಕೆ ಚುನಾವಣೆ 1 ವರ್ಷ ಮುಂದಕ್ಕೆ

**ಸಂ.ಕ.ಸಮಾಚಾರ ಬೆಂಗಳೂರು**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹಾಲಿ 198 ವಾರ್ಡ್‌ಗಳಿಂದ 243 ವಾರ್ಡ್‌ಗಳಿಗೆ ವಿಸ್ತರಿಸಲು ಸರ್ಕಾರ ಉದ್ದೇಶಿಸಿರುವುದರಿಂದ ಇನ್ನು ಒಂದು ವರ್ಷ ಕಾಲ ಬಿಬಿಎಂಪಿಗೆ ಚುನಾವಣೆ ನಡೆಯುವುದು ಅನುಮಾನ.



ಕಳೆದ ಸೆಪ್ಟೆಂಬರ್ ತಿಂಗಳಲ್ಲೇ ಬಿಬಿಎಂಪಿ ಸದಸ್ಯರ ಅಧಿಕಾರಾವಧಿ ಪೂರ್ಣಗೊಂಡಿದ್ದು ಈ ವೇಳೆಗೆ ಚುನಾವಣೆ ನಡೆಸಬೇಕಾಗಿತ್ತು. ಆದರೆ, ವಾರ್ಡ್‌ಗಳ ಪುನರ್ ವಿಂಗಡಣೆ ಮಾಡಲು ಮುಂದಾಗಿರುವುದರಿಂದ ಚುನಾವಣೆ ನಡೆಸದೆ ಬಿಬಿಎಂಪಿಗೆ ಆಡಳಿತಾಧಿಕಾರಿಯನ್ನು ನೇಮಕ ಮಾಡಲಾಗಿದೆ. ಇದನ್ನು ಪ್ರಶ್ನೆ ಮಾಡಿ ಕಾಂಗ್ರೆಸ್ ಸದಸ್ಯರು ಹೈಕೋರ್ಟ್ ಮೊರೆ ಹೋಗಿದ್ದರಿಂದ ನಿಗದಿತ ವೇಳೆಗೆ ಹಾಗೂ ಹಾಲಿ ಇರುವ 198 ವಾರ್ಡ್‌ಗಳಿಗೆ ಚುನಾವಣೆ ನಡೆಸುವಂತೆ ಆದೇಶ ಹೊರಡಿಸಿದೆ. ಆದರೆ, ಇದನ್ನು ಪ್ರಶ್ನೆ ಮಾಡಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಮುಂದಾಗಿದೆ.



> “ಹಾಲಿ ಇರುವ ವಾರ್ಡ್‌ಗಳಿಗೆ ಚುನಾವಣೆ ನಡೆಸಿದಲ್ಲಿ ಮುಂದೆ ಸಮಸ್ಯೆ ಎದುರಾಗಲಿದೆ. 2021ರ ಜನಗಣತಿ ಪ್ರಕಾರ ವಾರ್ಡ್‌ಗಳನ್ನು ರಚಿಸಿ ಚುನಾವಣೆ ಮಾಡಿದಲ್ಲಿ ಮುಂದಿನ ಮೂರು ಅವಧಿವರೆಗೂ ಯಾವುದೇ ಸಮಸ್ಯೆ ಎದುರಾಗುವುದಿಲ್ಲ
>
> ■ **ಜೆ.ಸಿ. ಮಾಧುಸ್ವಾಮಿ** | ಕಾನೂನು ಸಚಿವ

2011ರ ಜನಗಣತಿ ಪ್ರಕಾರವೇ ಚುನಾವಣೆ ನಡೆಸಿದರೂ ಒಂದೊಂದು ವಾರ್ಡ್‌ನಲ್ಲೂ ಮತದಾರರ ಸಂಖ್ಯೆಯಲ್ಲಿ ಏರುಪೇರಾಗಲಿದೆ. ಹಾಗಯೇ ಕೆಲವು ವಾರ್ಡ್‌ಗಳು ಬೇರೆ ವಿಧಾನಸಭಾ ಕ್ಷೇತ್ರಗಳಿಗೆ ಹೋಗಿರುವುದರಿಂದ ಆ ವಾರ್ಡ್ ತಮ್ಮ ಕ್ಷೇತ್ರಕ್ಕೆ ಸೇರುವುದಿಲ್ಲ ಎಂದು ಶಾಸಕರು ಸೌಲಭ್ಯ ಒದಗಿಸಲು ಮುಂದಾಗುವುದಿಲ್ಲ. ಇದು ಗೊಂದಲಕಾರಿಯಾಗಿದೆ.

ಈ ಲೋಪವನ್ನು ಸರಿಪಡಿಸುವುದಲ್ಲದೆ 2021ನೇ ಜನಗಣತಿ ವೇಳೆ ವಾರ್ಡ್‌ಗಳಲ್ಲಿ ಜನಸಂಖ್ಯೆ ಹೆಚ್ಚುವುದಲ್ಲದೆ ಮತದಾರರ ಸಂಖ್ಯೆಯೂ ಹೆಚ್ಚಲಿದೆ. 2021ರ ಜನಗಣತಿಗೆ ಅನುಗುಣವಾಗಿ 243 ವಾರ್ಡ್‌ಗಳಿಗೆ ಅನ್ವಯವಾಗುವಂತೆ ಚುನಾವಣೆ ನಡೆಸಲು ಸರ್ಕಾರ ಉದ್ದೇಶಿಸಿದೆ.

ಕೊರೊನಾ ಹಿನ್ನೆಲೆಯಲ್ಲಿ 2021ರ ಜನಗಣತಿ ಆರಂಭವಾಗಿಲ್ಲ. ಇಂತಹ ಸಂದರ್ಭದಲ್ಲಿ ಬಿಬಿಎಂಪಿಗೆ ಚುನಾವಣೆ ನಡೆಸುವುದು ಅನುಮಾನವಾಗಲಿದೆ.

ಈ ಹಿಂದೆ ವಾರ್ಡ್‌ಗಳ ಪುನರ್ ವಿಂಗಡಣೆ ಮಾಡಿ ಫೆಬ್ರವರಿ ವೇಳೆಗೆ ಚುನಾವಣೆ ನಡೆಸಲು ಸರ್ಕಾರ ಉದ್ದೇಶಿಸಿತ್ತು. ಆದರೆ, 2021ರ ಜನಗಣತಿ ಆಧಾರದ ಮೇಲೆ ಚುನಾವಣೆ ನಡೆಸಲು ಉದ್ದೇಶಿಸಲಾಯಿತು.

ಇದಕ್ಕೆ ಎಲ್ಲ ಪಕ್ಷಗಳ ಬೆಂಗಳೂರಿನ ಶಾಸಕರು ಕೂಡಾ ಒಪ್ಪಿಗೆ ನೀಡಿರುವುದರಿಂದ ಸರ್ಕಾರ ಸುಪ್ರೀಂಕೋರ್ಟ್ ಮೊರೆಹೋಗಲು ತೀರ್ಮಾನಿಸಿದೆ.

ಹೊಸ ದಿಗಂತ

| Date | 08-12-2020 |
| --- | --- |
| Page No | 12 |

# 861 ಸೋಂಕಿತರು ಆಸ್ಪತ್ರೆಯಿಂದ ಮನೆಗೆ

**ಬೆಂಗಳೂರು:** ನಗರದಲ್ಲಿ ಸೋಮವಾರ 501 ಜನರಿಗೆ ಕೊರೊನಾ ಸೋಂಕು ದೃಢಪಟ್ಟಿದೆ. 861 ಸೋಂಕಿತರು ಆಸ್ಪತ್ರೆಯಿಂದ ಮನೆಗೆ ತೆರಳಿದ್ದು, 7 ಜನರು ಮೃತರಾಗಿದ್ದಾರೆ. ನಗರದಲ್ಲಿ ಒಟ್ಟು 3,74,525 ಸೋಂಕಿತರು ದೃಢಪಟ್ಟಿದ್ದು, ಇಲ್ಲಿಯವರೆಗೆ 4190 ಜನರು ಸೋಂಕಿಗೆ ಬಲಿಯಾಗಿದ್ದಾರೆ. ಇಲ್ಲಿಯವರೆಗೆ 3,51,065 ಜನರು ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಕೋವಿಡ್ ನಿಗದಿತ ಆಸ್ಪತ್ರೆಗಳು ಹಾಗೂ ಆರೋಗ್ಯ ಕೇಂದ್ರಗಳು ಹಾಗೂ ಆರೈಕೆ ಕೇಂದ್ರಗಳು ಒಳಗೊಂಡಂತೆ 19,269 ಜನ ಸಕ್ರಿಯ ಸೋಂಕಿತರು ಚಿಕಿತ್ಸೆ ಪಡೆಯುತ್ತಿದ್ದಾರೆ. ಸೋಮವಾರದ ಬಿಬಿಎಂಪಿ ಕೋವಿಡ್ ವರದಿ ಪ್ರಕಾರ 8 ವಲಯದಲ್ಲಿ ಒಟ್ಟು ಸಕ್ರಿಯ 2 ಕಂಟೈನ್ಮೆಂಟ್ ಜೋನ್‌ಗಳಿವೆ. ನಗರದ 11,79,855 ಜನರನ್ನು ಪ್ರಾಥಮಿಕ ಸಂಪರ್ಕಿತರನ್ನು ಗುರುತಿಸಲಾಗಿದ್ದು, ದ್ವಿತೀಯ ಸಂಪರ್ಕಿತರನ್ನು 13,74,991 ಜನರನ್ನು ಗುರುತಿಸಲಾಗಿದೆ. ಇದರಲ್ಲಿ ಪಾಸಿಟಿವ್ ಪ್ರಮಾಣ ಶೇ.7.84 ರಷ್ಟಿದೆ. ಕೊರೊನಾದಿಂದ ಮೃತರಾಗುತ್ತಿರುವ ಪ್ರಮಾಣ ಶೇ.1.12 ರಷ್ಟಿದ್ದು, ಗುಣಮುಖರಾಗುತ್ತಿರುವ ಪ್ರಮಾಣ ಶೇ.93.74 ರಷ್ಟಿದೆ.

ಜನದನಿಯ ಸಾರಥಿ
ವಾರ್ತಾ ಭಾರತಿ

| Date | 08-12-2020 |
| --- | --- |
| Page No | 2 |


# ಇಂದಿರಾ ಕ್ಯಾಂಟೀನ್ ನಿರ್ವಹಣೆ ಕೊರತೆ

## ನಿಗದಿತ ಸಮಯಕ್ಕೆ ಊಟ ಸಿಗುತ್ತಿಲ್ಲ: ಸಾರ್ವಜನಿಕರ ಆರೋಪ

ಗುಡಿಬಂಡೆ, ಡಿ.7: ಹಸಿವು ಮುಕ್ತ ಕರ್ನಾಟಕ ಮಾಡುವ ಉದ್ದೇಶದಿಂದ ಆರಂಭವಾಗಿದ್ದ ಇಂದಿರಾ ಕ್ಯಾಂಟೀನ್ ಸರಿಯಾಗಿ ನಿರ್ವಹಣೆ ಇಲ್ಲದೆ, ಬಡವರಿಗೆ ನಿಗದಿತ ಸಮಯಕ್ಕೆ ತಿಂಡಿ, ಊಟ ಸಿಗುತ್ತಿಲ್ಲ ಎಂಬುದು ಸಾರ್ವಜನಿಕರ ಆರೋಪವಾಗಿದೆ.

ಪಟ್ಟಣದ ತಾಲೂಕು ಕಚೇರಿ ಆವರಣದಲ್ಲಿ ನಿರ್ಮಿಸಲಾಗಿದ್ದ ಇಂದಿರಾ ಕ್ಯಾಂಟೀನ್ ಮೂಲೆ ಗುಂಪಾಗಿರುವ ದೃಶ್ಯ ಕಾಣಿಸುತ್ತಿದೆ. ಇದರ ವಿರುದ್ಧ ಕ್ಯಾಂಟಿನ್ ಕಾರ್ಮಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

**4 ತಿಂಗಳ ವೇತನವಿಲ್ಲ:** 'ಇಂದಿರಾ ಕ್ಯಾಂಟೀನ್‌ನಲ್ಲಿ ಅಡುಗೆ ಕೆಲಸ ಮಾಡುವ ನಮಗೆ 4 ತಿಂಗಳ ವೇತನವಿಲ್ಲ, ಜೀವನ ಸಾಗಿಸಲು ತುಂಬಾ ಕಷ್ಟದ ಸ್ಥಿತಿಯಲ್ಲಿದ್ದೇವೆ' ಎಂದು ಅಡುಗೆ ಸಿಬ್ಬಂದಿ ಅಳಲು ತೋಡಿಕೊಂಡಿದ್ದಾರೆ.

**ಕ್ಯಾಂಟೀನ್ ನಿರ್ವಹಣೆ ಅಷ್ಟಕ್ಕಷ್ಟೇ:** ಹಿಂದಿನ ರಾಜ್ಯ ಸರಕಾರ ಕೂಲಿ ಕಾರ್ಮಿಕರು ಮತ್ತು ಬಡರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಕ್ಯಾಂಟೀನ್ ತೆರೆದಿದ್ದು ಪ್ರತಿ ದಿನ ನಿರ್ವಹಣೆ ಮಾಡಲು ಸಾಧ್ಯವಾಗದ ಸ್ಥಿತಿಯಲ್ಲಿದೆ. ಈ ಸಮಸ್ಯೆಗೆ ಯಾರು ಹೊಣೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.

**ಸರಕಾರದ ಹಣ ದುರುಪಯೋಗ:** ಸರಕಾರದ ಮಾರ್ಗ ಸೂಚಿಯಂತೆ ಪ್ರತಿದಿನ ಕನಿಷ್ಠ 500 ಟೋಕನ್ ಅಂದರೆ 500 ಜನರಿಗೆ ಊಟ ನೀಡಬೇಕು. ಆದರೆ ಇಲ್ಲಿ ಪ್ರತಿದಿನ 100 ಕ್ಕಿಂತ ಕಡಿಮೆ ಜನರಿಗೆ ಊಟ ನೀಡಿ ಸಂಪೂರ್ಣ ಹಣದ ಬಿಲ್ ಮಾಡಿಕೊಳ್ಳುತ್ತಿದ್ದಾರೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

ಕಾಂಗ್ರೆಸ್ ಸರಕಾರದ ಮಹತ್ವಾಕಾಂಕ್ಷೆ ಯೋಜನೆಯನ್ನು ಬಿಜೆಪಿ ಸರಕಾರ ಮೂಲೆ ಗುಂಪು ಮಾಡಿದೆ. ಬಡವರಿಗೆ, ಕೂಲಿ ಕಾರ್ಮಿಕರಿಗೆ ಇಂದಿರಾ ಕ್ಯಾಂಟೀನ್‌ಗಳಲ್ಲಿ ಒಂದು ಹೊತ್ತು ಊಟ ಹಾಕುವಲ್ಲಿ ಸರಕಾರ ವಿಫಲವಾಗಿದೆ.

-ಎಚ್.ಪಿ. ಲಕ್ಷ್ಮೀನಾರಾಯಣ,
ಸಿಪಿಎಂ ಮುಖಂಡ

ಪಟ್ಟಣ ಪಂಚಾಯತ್‌ನ ಇಂದಿರಾ ಕ್ಯಾಂಟೀನ್ ನಿರ್ವಹಣೆಯಲ್ಲಿ ನಮಗೆ ಯಾವುದೇ ಸಂಬಂಧವಿಲ್ಲ. ಅಲ್ಲಿ ಕೆಲಸ ನಿರ್ವಹಿಸುವವರಿಗೆ ಸಂಬಳ ಕೊಟ್ಟಿಲ್ಲ ಅನ್ನುವುದು ನನ್ನ ಗಮನಕ್ಕೆ ಬಂದಿದೆ ಹಾಗೂ ಇಂದಿರಾ ಕ್ಯಾಂಟೀನ್‌ನ ಎಲ್ಲ ಸಮಸ್ಯೆಗಳ ಬಗ್ಗೆ ಮೇಲಧಿಕಾರಿಗಳ ಗಮನಕ್ಕೆ ತರುತ್ತೇನೆ.

– ರಾಜಶೇಖರ್,
ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ

ಜನದನಿಯ ಸಾರಥಿ
ವಾರ್ತಾ ಭಾರತಿ

| Date | 08-12-2020 |
|---|---|
| Page No | 5 |

## ಕೊರೋನ ಜಾಗೃತಿ ಮೂಡಿಸಲು ಖಾಸಗಿ ಜಾಹೀರಾತಿಗೆ ಅವಕಾಶ

# 18 ಲಕ್ಷ ರೂ. ತೆರಿಗೆ ಹಣ ವಸೂಲಿ ಮಾಡಲು ಹೈಕೋರ್ಟ್ ಸೂಚನೆ



ಬೆಂಗಳೂರು, ಡಿ.7: ಕೊರೋನ ಜಾಗೃತಿ ಕುರಿತು ಜಾಹೀರಾತು ಅಳವಡಿಸುವ ಸಂದರ್ಭದಲ್ಲಿ ಖಾಸಗಿ ಕಂಪೆನಿಗಳ ಜಾಹೀರಾತಿಗೆ ಅವಕಾಶ ನೀಡಿದ್ದ ಪ್ರಕರಣದಲ್ಲಿ ಜಾಹೀರಾತುದಾರರಿಗೆ ವಿಧಿಸಿರುವ 18 ಲಕ್ಷ ರೂ.ತೆರಿಗೆ ಹಣವನ್ನು ಒಂದು ವಾರದಲ್ಲಿ ವಸೂಲಿ ಮಾಡಿ ಬಿಬಿಎಂಪಿಗೆ ಪಾವತಿಸಬೇಕು ಎಂದು ರಾಜ್ಯ ಸರಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಈ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ವಿಭಾಗೀಯ ನ್ಯಾಯಪೀಠ, ಹಣವನ್ನು ವಸೂಲಿ ಮಾಡಲು ತಪ್ಪಿ ದರೆ ಸರಕಾರವೇ ಆ ಮೊತ್ತವನ್ನು ಪಾಲಿಕೆಗೆ ಭರಿಸಬೇಕೆಂದು ರಾಜ್ಯ ಸರಕಾರಕ್ಕೆ ಎಚ್ಚರಿಕೆ ನೀಡಿದೆ.

ನ್ಯಾಯಾಲಯದ ಅನುಮತಿ ದುರ್ಬಳಕೆ ಮಾಡಿಕೊಂಡಿರುವ ಆರೋಗ್ಯ ಇಲಾಖೆ ಅಧಿಕಾರಿಗಳ ವಿರುದ್ಧ ವಿಚಾರಣೆ ನಡೆಸಿ, ತಪ್ಪಿ ತಸ್ಥರ ವಿರುದ್ಧ ಕ್ರಮ ಜರುಗಿಸಿಲ್ಲ. ಬಿಬಿಎಂಪಿಗೆ ಖಾಸಗಿ ಕಂಪನಿಗಳಿಂದ ಬರಬೇಕಿದ್ದ 18 ಲಕ್ಷ ರೂ. ತೆರಿಗೆ ಹಣವನ್ನೂ ವಸೂಲಿ ಮಾಡಿಲ್ಲ ಎಂದಿತು.

ತಪ್ಪಿ ತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡ ವರದಿ ಸಲ್ಲಿಸಬೇಕು ಎಂದು ನಿರ್ದೇಶಿಸಿ ವಿಚಾರಣೆಯನ್ನು ಡಿ.15ಕ್ಕೆ ಮುಂದೂಡಿತು.

ಜಯ ಕಿರಣ
JAYAKIRANA MORNING DAILY ವಸ್ತುನಿಷ್ಠ ಸುದ್ದಿ-ಮಾಹಿತಿಗಳ ಪ್ರತಿಬಿಂಬ

| Date | 07-12-2020 |
| --- | --- |
| Page No | 1 |

# ಸುಪ್ರೀಂ ಕೋರ್ಟ್ ಮೆಟ್ಟಿಲ ಮೇಲೆ ಪಾಲಿಕೆ ಭವಿಷ್ಯ?

## ಶತಾಯಗತಾಯ ಬಿಬಿಎಂಪಿ ಚುನಾವಣೆಗೆ ವಿಳಂಬ ಸೂತ್ರ

ಬೆಂಗಳೂರು: ಹೈಕೋರ್ಟ್ 6 ವಾರದೊಳಗೆ ಚುನಾವಣೆ ನಡೆಸಲೇ ಬೇಕೆಂಬ ತೀರ್ಪಿನ ವಿರುದ್ಧ ಸರ್ಕಾರ ತಿರುಗಿಬೀಳಲು ಬೇರೆ ಸೂತ್ರ ಅಣಿ ಮಾಡಿಕೊಳ್ಳುತ್ತಿದೆ. ಕನಿಷ್ಠ 4-5 ತಿಂಗಳಾದರೂ ಮುಂದೂಡುವಲ್ಲಿ ಸಫಲರಾದರೆ 21 ಸಾವಿರ ಕೋಟಿಗೂ ಹೆಚ್ಚಿನ ಕಾಮಗಾರಿಗಳು ಪೂರ್ಣಗೊಳ್ಳಲಿವೆ. ಅವುಗಳ ಯಶಸ್ಸು ಹಾಗೂ 'ಅದು' ಅವರವರ ಜೋಳಿಗೆಗೆ ಬೀಳುವುದು ನಿಶ್ಚಿತ. ಇದರೊಂದಿಗೆ ಅಭಿವೃದ್ಧಿಯ ಮಂತ್ರ ಜಪಿಸುತ್ತಾ,



ಪೂರ್ಣ ಬಹುಮತದೊಂದಿಗೆ ಅಧಿಕಾರದ ಗದ್ದುಗೆ ಹಿಡಿಯಲು ಅನುಕೂಲವಾಗುತ್ತದೆಂಬ ಲೆಕ್ಕಾಚಾರದಲ್ಲಿ



ಕಾನೂನು ತಜ್ಞರನ್ನು ಆಶ್ರಯಿಸಿದ್ದಾರೆ. ನುರಿತ ತಜ್ಞರಿಂದ ಚುನಾವಣೆ ಮುಂದೂಡಲು ಸಲಹೆಗಳನ್ನು ಪಡೆದು,




ಈಗಾಗಲೇ ಜಂಟಿ ಸದನ ಸಮಿತಿಯಿಂದ ಬಿಬಿಎಂಪಿಯ ಹೊಸ

ಕೊನೆಯ ಪುಟಕ್ಕೆ

# ವಿಳಂಬ ಸೂತ್ರ

ಕಾಯ್ದೆಯನ್ನು ಅಂತಿಮಗೊಳಿಸ ಲಾಗಿದೆ. 1976ರ ಕೆಎಂಸಿ ಕಾಯ್ದೆಗೆ ಸಮಾಧಿ ಕಟ್ಟಿ, 2020ರ ಹೊಸ ಕಾಯ್ದೆಗೆ ಜೀವ ನೀಡಲಾಗಿದೆ. ಇದೀಗ ಆರಂಭವಾಗುವ ಅಧಿವೇಶನದಲ್ಲಿ ಈ ಕಾಯ್ದೆಯನ್ನು ಮಂಡಿಸಿ ಒಪ್ಪಿಗೆ ಪಡೆದು, ಗೆಜೆಟ್ ಹೊರಡಿಸಿದರೆ, ಅದಕ್ಕೆ ಮಾನ್ಯತೆ ದೊರಕುತ್ತದೆ.

ಅಲ್ಲಿಗೆ ಹಳೆಯ ಕಾಯಿದೆ ಸತ್ವ ಕಳೆದುಕೊಂಡು ಹೊಸ ಕಾಯ್ದೆಗೆ ಜೀವ ಬರಲಿದೆ. ಅದನ್ನಿಟ್ಟೆ ಹೈಕೋರ್ಟ್ ಆದೇಶ ಮತ್ತು ತೀರ್ಪನ್ನು ಪ್ರಶ್ನಿಸಲೂ ಬಹುದು. ಸಾಕಷ್ಟು ಸಮಯವನ್ನು ಪಡೆದುಕೊಳ್ಳಲೂ ಬಹುದು. ಅಷ್ಟರಲ್ಲಿ 2021 ಜನಗಣತಿ ಆರಂಭವಾಗುತ್ತದೆ. ಹೊಸ ಜನಗಣತಿಯ ಆಧಾರದ ಮೇಲೆ ಮುಂದಿನ 10 ವರ್ಷಕ್ಕೆ ಆಡಳಿತದಲ್ಲಿ ತಿದ್ದುಪಡಿ ತಂದು ಹೊಸ ಕಾನೂನು ರಚಿಸಿ ಪಾಲಿಕೆ ಚುನಾವಣೆಗೆ ಚಾಲನೆ ನೀಡುವುದು ಸರ್ಕಾರದ ಉದ್ದೇಶವಂತೆ.

ಅಲ್ಲಿಗೆ ಹೈಕೋರ್ಟ್ ಆದೇಶ ಕಸದ ಬುಟ್ಟಿಗೆ ಸೇರಿದಂತೆ. ಮುಂದುವರಿದು ಸುಪ್ರೀಂ ಕೋರ್ಟಿನ ಮೆಟ್ಟಿಲ ಮೇಲೆ ಈ ಎಲ್ಲ ವಿಚಾರಗಳನ್ನು ಮಂಡಿಸಿ, ಸಮಯ ತೆಗೆದುಕೊಳ್ಳಲು ಅನುಕೂಲವಾಗಲಿದೆ. ಅಲ್ಲಿಗೆ 198 ವಾರ್ಡ್‌ಗಳು 243ಕ್ಕೆ ಹಿಗ್ಗುತ್ತದಾ?

ಹಳೆಯ ವ್ಯಾಪ್ತಿಯನ್ನು ಹಿಗ್ಗಿಸಿಕೊಂಡು 60ಕ್ಕೂ ಹೆಚ್ಚಿನ ಹಳ್ಳಿಗಳಿಗೆ ಪಾಲಿಕೆ ಸೌಕರ್ಯಗಳ ಭಾಗ್ಯ ದೊರಕುತ್ತದಾ? 50ಕ್ಕೂ ಹೆಚ್ಚಿನ ಹೊಸ ಪುರಪಿತೃಗಳಿಗೆ ಅವಕಾಶ ಲಭಿಸುತ್ತದಾ? 1995, 2006, 2015ರಂತೆ 2020 ಕೂಡಾ ವಿವಾದ ಕೋರ್ಟ್‌ನ ಕೆಂಗಣ್ಣು, ನಾಟಕ ಪ್ರಹಸನಗಳಿಗೆ ಗುರಿಯಾಗಿ ಚುನಾವಣೆ ನಡೆಸಲು ಸುಪ್ರೀಂ ಕೋರ್ಟ್ ಕೂಡಾ ಚಾಟಿ ಬೀಸಲೇಬೇಕಾ? ಸುಪ್ರೀಂ ಕೋರ್ಟ್ ಆದೇಶಕ್ಕೆ ಮಣಿದು ಚುನಾವಣೆ 2021ರಲ್ಲಿ ನಡೆಯುವುದು ನಿಶ್ಚಿತವಾ? ಎಲ್ಲವೂ ಅಧಿವೇಶನದ ಆದೇಶದ ಮೇಲೆ ನಿರ್ಧಾರಿತವಾಗಲಿದೆ.

ಈ ಸಂಜೆ

| Date | 07-12-2020 |
| --- | --- |
| Page No | 6 |


## ಬಿಬಿಎಂಪಿ ಅಧಿಕಾರಿಗಳ "ದಂಡ" ದರ್ಬಾರಿನ ವಿರುದ್ಧ

# ಹೋರಾಟದ ಎಚ್ಚರಿಕೆ

ಬೆಂಗಳೂರು, ಡಿ.7- ಆಳುವ ಸರ್ಕಾರ ಜನ ಸಮುದಾಯವನ್ನು "ದಂಡ" ಪ್ರಯೋಗದ ಮೂಲಕ ಸದೆ ಬಡಿಯಲು ಮುಂದಾಗಿದೆ.

ಕೊರೊನಾದಿಂದ ಕಳೆದ ಎಂಟತ್ತು ತಿಂಗಳಿನಿಂದ ವ್ಯಾಪಾರ ವಹಿವಾಟುಗಳಿಲ್ಲದೆ ಕಂಗೆಟ್ಟು ಈಗಷ್ಟೇ ಚೇತರಿಸಿಕೊಳ್ಳುತ್ತಿರುವ ಹೋಟೆಲ್, ಮಾಲ್, ಥಿಯೇಟರ್, ದರ್ಶಿನಿ, ಅಂಗಡಿ, ಬೀದಿ ಬದಿ ವರ್ತಕರು, ಎಸಿ ರೆಸ್ಟೋರೆಂಟ್, ಪಾರ್ಟಿ ಹಾಲ್, ಥಿಯೇಟರ್, ಮಾಲ್, ಸ್ಟಾರ್ ಹೋಟೆಲ್, ಕಲ್ಯಾಣ ಮಂಟಪಗಳಿಗೆ ಕೊರೊನಾ ಎರಡನೇ ಅಲೆ ನಿಯಂತ್ರಣ ನೆಪದಲ್ಲಿ ಅವೈಜ್ಞಾನಿಕ ದಂಡ ವಿಧಿಸಲು ಮುಂದಾಗಿರುವುದು ಸಾರ್ವಜನಿಕ ಆಕ್ರೋಶಕ್ಕೆ ಕಾರಣವಾಗಿದೆ.

ಸಾರ್ವಜನಿಕರು ಮಾಸ್ಕ್ ಧರಿಸದಿದ್ದರೆ, ಸಾಮಾಜಿಕ ಅಂತರ ಕಾಪಾಡಿಕೊಳ್ಳದಿದ್ದರೆ, ಸಂಬಂಧಪಟ್ಟ ವ್ಯಾಪಾರ ಸ್ಥಳದ ಮಾಲೀಕರಿಗೆ ದಂಡ ವಿಧಿಸಲು ಬಿಬಿಎಂಪಿ ಹೊರಡಿಸಿರುವ ಸುತ್ತೋಲೆ ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಎಳೆದಂತೆ ಆಗಿದೆ ಎಂದು ಹೋಟೆಲ್, ಮಾಲ್, ರೆಸ್ಟೋರೆಂಟ್ ಮಾಲೀಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಗ್ರಾಹಕರು ಮಾಸ್ಕ್ ಧರಿಸದಿದ್ದರೆ, ನಮಗೇಕೆ ದಂಡ? ಇತರರಿಗೆ ಇರದ ಕಾನೂನು ನಮಗೆ ಮಾತ್ರವೇ ರಾಜಕಾರಣಿಗಳು ಬೇಕಾದಂತೆ ಸಭೆ, ಸಮಾರಂಭಗಳನ್ನು



ಆಯೋಜಿಸುತ್ತಾರೆ. ಸಭೆ ಸೇರುತ್ತಾರೆ, ಪ್ರತಿಭಟನಾ ರ‍್ಯಾಲಿ, ಮೆರವಣಿಗೆಗಳನ್ನು ಮಾಡುತ್ತಾರೆ. ಆದರೆ, ಸರ್ಕಾರವಾಗಲಿ ಬಿಬಿಎಂಪಿ ಆಗಲಿ, ಯಾವುದೇ ದಂಡ ವಿಧಿಸುವುದಿಲ್ಲ. ಆದರೆ, ಬ್ಯಾಂಕ್ ಲೋನ್ ಪಡೆದು, ಉದ್ಯಮ ಪ್ರಾರಂಭಿಸಿ ಕಾಲಕಾಲಕ್ಕೆ ತೆರಿಗೆ ಕಟ್ಟುವ ನಮಗೆ ಇಲ್ಲದ ನಿಯಮಾವಳಿಗಳನ್ನು ರೂಪಿಸಿ ಸರ್ಕಾರ ಶೋಷಣೆ ಮಾಡುತ್ತಿದೆ ಎಂದು ಹೋಟೆಲ್ ಮತ್ತು ಮಾಲ್ ಮಾಲೀಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೊರೊನಾದಿಂದ ಈಗಾಗಲೇ ವ್ಯಾಪಾರವನ್ನು ನಂಬಿ ಬದುಕುತ್ತಿರುವ ವರ್ಗ ತತ್ತರಿಸಿದೆ. ಕೋವಿಡ್ 19 ತಡೆಗಟ್ಟುವ ನೆಪದಲ್ಲಿ ಅಧಿಕ ಮೊತ್ತದ ದಂಡ ಪ್ರಯೋಗಕ್ಕೆ ಮುಂದಾಗಿರುವ ಬಿಬಿಎಂಪಿ ಕೇವಲ ತನ್ನ ಖಜಾನೆ ಭರ್ತಿಗೊಳಿಸುವ ಕಾರ್ಯಕ್ಕಿಳಿದಿದೆಯೇ ಹೊರತು, ಜನಸಾಮಾನ್ಯರ ನೆರವಿಗೆ ನಿಂತಿಲ್ಲ. ಕೊರೊನಾ ಎರಡನೇ ಅಲೆ ತೀವ್ರವಾಗುವ ಸ್ವರೂಪ ಎದುರಾದರೆ ಎಲ್ಲವನ್ನೂ ಬಂದ್ ಮಾಡಿಸಲಿ ಅದನ್ನು ಬಿಟ್ಟು ಬೇಕಾಬಿಟ್ಟಿ ದಂಡ ವಿಧಿಸಿ ನಮ್ಮನ್ನು ಶೋಷಣೆ ಮಾಡುವ ಅಗತ್ಯವೇನು ಎಂದು ಸಾರ್ವಜನಿಕರು ಪ್ರಶ್ನಿಸುತ್ತಿದ್ದಾರೆ.

ಸಾರ್ವಜನಿಕರು ಮಾಸ್ಕ್ ಧರಿಸದಿದ್ದರೆ, ಸಾಮಾಜಿಕ ಅಂತರ ಕಾಪಾಡಿಕೊಳ್ಳದಿದ್ದರೆ ಸಂಬಂಧಪಟ್ಟ ಮಾಲೀಕರಿಗೆ ದಂಡ ವಿಧಿಸುವುದು ಎಷ್ಟು ಸಮಂಜಸ ಕೋವಿಡ್ ನೆಪದಲ್ಲಿ ನಿರೀಕ್ಷೆಗೂ ಮೀರಿ ಬಿಬಿಎಂಪಿ ದಂಡ ವಸೂಲಿಗೆ ಇಳಿದಿರುವುದರ ವಿರುದ್ಧ ಬೀದಿ ಬದಿ ವ್ಯಾಪಾರಿ ಸಂಘಟನೆಗಳು, ಹೋಟೆಲ್ ಮಾಲೀಕರು ಹೋರಾಟದ ಎಚ್ಚರಿಕೆ ರವಾನಿಸಿದ್ದಾರೆ.

ಒಂದು ಕಡೆ ಆರ್ಥಿಕ ಚಟುವಟಿಕೆ ಸಕ್ರಿಯಗೊಳಿಸುವ ನಿಟ್ಟಿನಲ್ಲಿ ಲಾಕ್‌ಡೌನ್ ತೆರವುಗೊಳಿಸಿ ಉದ್ಯಮಿಗಳಿಗೆ ಅವಕಾಶ ಕಲ್ಪಿಸಿದ ಸರ್ಕಾರ ಮತ್ತೊಂದು ಕಡೆ ಕೊರೊನಾ ಎರಡನೇ ಅಲೆ ಭೀತಿ ನಿಯಂತ್ರಿಸುವ ನೆಪದಲ್ಲಿ ದಂಡಾಸ್ತ್ರ ಪ್ರಯೋಗಕ್ಕೆ ಮುಂದಾಗಿ ಗಾಯದ ಮೇಲೆ ಬರೆ ಎಳೆಯಲು ಹೊರಟಿದೆ.

ಬಿಬಿಎಂಪಿಯಲ್ಲಿ ಅಧಿಕಾರಿಗಳ ಅಂಧಾ ದರ್ಬಾರ್ ಜೋರಾಗಿದೆ. ಇದೇನು ದಂಡದ ಸರ್ಕಾರವೇ? ಈಗಾಗಲೇ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ವಿದ್ಯುತ್, ನೀರಿನ ಬಿಲ್ ಏರಿಕೆ ದಿನನಿತ್ಯದ ಪದಾರ್ಥಗಳ ಬೆಲೆ ಏರಿಕೆಯಿಂದ ಜನ ಕಂಗೆಟ್ಟಿದ್ದಾರೆ. ಸಾರ್ವಜನಿಕರು ಮಾಸ್ಕ್ ಧರಿಸದಿದ್ದರೆ, ಮಾರ್ಷಲ್‌ಗಳ ಮೂಲಕ 250 ರೂ.ಗಳನ್ನು ಬಿಬಿಎಂಪಿ ದಂಡ ವಸೂಲು ಮಾಡುತ್ತಿದೆ. ಈಗ ಕಸದ ಸೆಸ್ ನೆಪದಲ್ಲಿ ಪ್ರತಿ ಮನೆಗೆ ಪ್ರತಿ ತಿಂಗಳು 200 ರೂ. ಶುಲ್ಕ ವಿಧಿಸಲು ಮುಂದಾಗಿದೆ.

ಇದರ ಜತೆಗೆ ಈಗ ಕೊರೊನಾ ಸೋಂಕು ನಿಯಂತ್ರಣದ ನೆಪದಲ್ಲಿ ಗ್ರಾಹಕರು ಮಾಸ್ಕ್ ಧರಿಸದಿದ್ದರೆ ಹೋಟೆಲ್, ದರ್ಶಿನಿ, ಅಂಗಡಿ, ಬೀದಿ ಬದಿ ವರ್ತಕರಿಗೆ 5 ಸಾವಿರ ರೂ. ಸ್ಟೋರ್, ಖಾಸಗಿ ಬಸ್ ನಿಲ್ದಾಣದ ಅಂಗಡಿಗಳವರಿಗೆ 25 ಸಾವಿರ ರೂ., ಎಸಿ ರೆಸ್ಟೋರೆಂಟ್, ಪಾರ್ಟಿ ಹಾಲ್, ಥಿಯೇಟರ್ ಮಾಲ್‌ಗಳಿಗೆ 50 ಸಾವಿರ ರೂ., ಸ್ಟಾರ್ ಹೋಟೆಲ್, 500 ಆಸನಕ್ಕಿಂತ ಹೆಚ್ಚಿರುವ ದೊಡ್ಡ ಕಲ್ಯಾಣ ಮಂಟಪಗಳಿಗೆ 1 ಲಕ್ಷ ರೂ., ಸಭೆ, ರ‍್ಯಾಲಿ ಮತ್ತಿತರ ಕಾರ್ಯಕ್ರಮಗಳನ್ನು ಆಯೋಜಿಸುವ ಆಯೋಜಕರಿಗೆ ರೂ. 50 ಸಾವಿರ ದಂಡ ವಿಧಿಸಲು ಮುಂದಾಗಿದೆ.

ನಿರೀಕ್ಷೆಗೂ ಮೀರಿ ದಂಡ ವಿಧಿಸಲು ಸುತ್ತೋಲೆ ಹೊರಡಿಸಿರುವ ಬಿಬಿಎಂಪಿಯ ಈ ಕ್ರಮಕ್ಕೆ ಸಂಘಟನೆಗಳಲ್ಲದೆ




**ಒಂದು ಕಡೆ ಆರ್ಥಿಕ ಚಟುವಟಿಕೆ ಸಕ್ರಿಯಗೊಳಿಸುವ ನಿಟ್ಟಿನಲ್ಲಿ ಲಾಕ್‌ಡೌನ್ ತೆರವುಗೊಳಿಸಿ ಉದ್ಯಮಿಗಳಿಗೆ ಅವಕಾಶ ಕಲ್ಪಿಸಿದ ಸರ್ಕಾರ ಮತ್ತೊಂದು ಕಡೆ ಕೊರೋನಾ ಎರಡನೇ ಅಲೆ ಭೀತಿ ನಿಯಂತ್ರಿಸುವ ನೆಪದಲ್ಲಿ ದಂಡಾಸ್ತ್ರ ಪ್ರಯೋಗಕ್ಕೆ ಮುಂದಾಗಿ ಗಾಯದ ಮೇಲೆ ಬರೆ ಎಳೆಯಲು ಹೊರಟಿದೆ.**


ಸಾರ್ವಜನಿಕರಿಂದಲೂ ತೀವ್ರ ಪ್ರತಿರೋಧ ವ್ಯಕ್ತವಾಗಿದೆ.

ಬೀದಿ ಬದಿ ವ್ಯಾಪಾರಿಗಳು ನಿತ್ಯ 200ರಿಂದ 1000 ರೂ. ದುಡಿಮೆ ಮಾಡುತ್ತಾರೆ. ಕೋವಿಡ್ ನಿಯಮ ಉಲ್ಲಂಘಿಸಿದರೆ, 5000 ರೂ. ದಂಡ ಕಟ್ಟಬೇಕಾಗುತ್ತದೆ. ಕೆಲವೊಮ್ಮೆ ಮಾಸ್ಕ್ ಧರಿಸದೆ ಗ್ರಾಹಕರು ಬಂದರೆ ಅವರನ್ನು ವಾಪಸ್ ಕಳಿಸಬೇಕು, ಇಲ್ಲವೇ ದಂಡ ಕಟ್ಟಬೇಕು. ಮಾಸ್ಕ್ ಧರಿಸದವರಿಗೆ ದಂಡ ವಸೂಲಿ ಮಾಡಲು ಮಾರ್ಷಲ್‌ಗಳನ್ನು ನೇಮಕ ಮಾಡಲಾಗಿದೆ. ಕಲ್ಯಾಣ ಮಂಟಪ ಹೋಟೆಲ್, ಅಂಗಡಿ ಮಾಲ್ ಮುಂತಾದೆಡೆ ಮಾರ್ಷಲ್‌ಗಳಿಂದಲೇ ನೇರವಾಗಿ ಬಿಬಿಎಂಪಿ ದಂಡ ವಸೂಲು ಮಾಡಲಿ. ಅದನ್ನು ಬಿಟ್ಟು ಆಯೋಜಕರು ದಂಡವನ್ನು ಏಕೆ ಕಟ್ಟಬೇಕು. ಇದೊಂದು ಅವೈಜ್ಞಾನಿಕ ಕ್ರಮವಾಗಿದೆ ಎಂಬುದು ವರ್ತಕರ ಆಕ್ರೋಶವಾಗಿದೆ.

ಕಲ್ಯಾಣ ಮಂಟಪಗಳಲ್ಲಿ, ಹೋಟೆಲ್ ಮಾಲ್‌ಗಳಲ್ಲಿ ಕೊರೊನಾ ಶಿಷ್ಟಾಚಾರವನ್ನು ಈಗಾಗಲೇ ಪಾಲಿಸಲಾಗುತ್ತಿದೆ. ಸ್ಯಾನಿಟೈಸರ್ ಬಳಸಿ ಬರುವ ಗ್ರಾಹಕರು ಮಾಸ್ಕ್ ಧರಿಸಿದ್ದಾರೋ ಇಲ್ಲವೋ ಎಂಬುದನ್ನು ಕಡ್ಡಾಯವಾಗಿ ನೋಡಲಾಗುತ್ತದೆ. ಅಲ್ಲದೆ, ಥರ್ಮಲ್ ಸ್ಕ್ಯಾನ್ ಕೂಡಾ ಮಾಡಲಾಗುತ್ತಿದೆ. ಜಾಗೃತಿ ಮೂಡಿಸುವ ಫಲಕಗಳನ್ನೂ ಕೂಡಾ ಅಳವಡಿಸಲಾಗಿದೆ. ಇಷ್ಟೆಲ್ಲ ಮಾಡಿದರೂ ಮಾಲೀಕರಿಗೆ ಕೋವಿಡ್ ನಿಯಮ ಉಲ್ಲಂಘನೆಗೆ ದುಬಾರಿ ದಂಡ ವಿಧಿಸಲು ಬಿಬಿಎಂಪಿ ಮುಂದಾಗಿರುವುದು ತೀವ್ರ ವ್ಯತಿರಿಕ್ತವಾಗಿದೆ. ಈ ಆದೇಶವನ್ನು ಕೂಡಲೇ ಹಿಂಪಡೆಯಬೇಕೆಂಬ ಒತ್ತಾಯ ಕೇಳಿಬಂದಿದೆ.

ನಿನ್ನೆಯಷ್ಟೇ ಬೆಳಗಾವಿಯಲ್ಲಿ ಬಿಜೆಪಿ ಕಾರ್ಯಕಾರಿಣಿ ಸಭೆ ಅದ್ದೂರಿಯಾಗಿ ನೆರವೇರಿತು ಸಾವಿರಾರು ಜನ ಪಾಲ್ಗೊಂಡಿದ್ದರು. ಕರ್ನಾಟಕ ಬಂದ್ ಸಂದರ್ಭದಲ್ಲಿ ಸಾವಿರಾರು ಹೋರಾಟಗಾರರು ಪಾಲ್ಗೊಂಡಿದ್ದರು. ಮತ್ತೆ ನಾಳೆ ಬಂದ್‌ಗೆ ಕರೆ ಕೊಡಲಾಗಿದೆ. ರ‍್ಯಾಲಿ ಮೆರವಣಿಗೆಗಳು ನಡೆಯುತ್ತವೆ. ಇದ್ಯಾವುದಕ್ಕೂ ಅನ್ವಯಿಸದ ಕೊರೊನಾ ನಿಯಮಾವಳಿಗಳು ಬೀದಿ ಬದಿ ವ್ಯಾಪಾರಿಗಳಿಗೆ ಹೋಟೆಲ್, ಮಾಲ್, ಕಲ್ಯಾಣ ಮಂಟಪಗಳಿಗೆ ಏಕೆ ಎಂಬುದು ಮಾಲೀಕರ ಪ್ರಶ್ನೆ. ಅದು ಗ್ರಾಹಕರು ಮಾಡುವ ತಪ್ಪಿಗೆ ನಮಗೇಕೆ ಶಿಕ್ಷೆ? ಕೋವಿಡ್ 19 ಬಂದಾಗಿನಿಂದಲೂ ಎಲ್ಲ ರೀತಿಯ ಸಹಕಾರವನ್ನು ನೀಡುತ್ತಾ ಬಂದಿದ್ದೇವೆ. ಸಾಕಷ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸಿದ್ದೇವೆ. ಹೀಗಿದ್ದರೂ, ಇಷ್ಟು ಪ್ರಮಾಣದ ದಂಡ ವಸೂಲಿಗೆ ಇಳಿದಿರುವುದು ಸಮಂಜಸವಲ್ಲ. ಹೋಟೆಲ್ ಮಾಲೀಕರ ಸಂಘ, ಚಿತ್ರಮಂದಿರ ಮಾಲೀಕರ ಸಂಘ, ಕಲ್ಯಾಣ ಮಂಟಪಗಳ ಮಾಲೀಕರ ಸಂಘ, ಮಾಲ್ ಹಾಗೂ ಬೀದಿ ಬದಿ ವ್ಯಾಪಾರಿಗಳ ಸಂಘಟನೆಗಳು ಸೇರಿದಂತೆ ವಿವಿಧ ಸಂಘಟನೆಗಳು ಸಭೆ ಸೇರಿ ಸುತ್ತೋಲೆ ವಾಪಸ್ ಪಡೆಯುವಂತೆ ಒತ್ತಾಯಿಸುತ್ತೇವೆ. ಇಲ್ಲದಿದ್ದರೆ ಹೋರಾಟಕ್ಕಿಳಿಯುತ್ತೇವೆ ಎಂದು ಎಚ್ಚರಿಸಿದ್ದಾರೆ.


**ಬೀದಿ ಬದಿ ವ್ಯಾಪಾರಿಗಳು ನಿತ್ಯ 200ರಿಂದ 1000 ರೂ. ದುಡಿಮೆ ಮಾಡುತ್ತಾರೆ. ಕೋವಿಡ್ ನಿಯಮ ಉಲ್ಲಂಘಿಸಿದರೆ, 5000 ರೂ. ದಂಡ ಕಟ್ಟಬೇಕಾಗುತ್ತದೆ. ಕೆಲವೊಮ್ಮೆ ಮಾಸ್ಕ್ ಧರಿಸದೆ ಗ್ರಾಹಕರು ಬಂದರೆ ಅವರನ್ನು ವಾಪಸ್ ಕಳಿಸಬೇಕು, ಇಲ್ಲವೇ ದಂಡ ಕಟ್ಟಬೇಕು. ಮಾಸ್ಕ್ ಧರಿಸದವರಿಗೆ ದಂಡ ವಸೂಲಿ ಮಾಡಲು ಮಾರ್ಷಲ್‌ಗಳನ್ನು ನೇಮಕ ಮಾಡಲಾಗಿದೆ. ಕಲ್ಯಾಣ ಮಂಟಪ ಹೋಟೆಲ್, ಅಂಗಡಿ ಮಾಲ್ ಮುಂತಾದೆಡೆ ಮಾರ್ಷಲ್‌ಗಳಿಂದಲೇ ನೇರವಾಗಿ ಬಿಬಿಎಂಪಿ ದಂಡ ವಸೂಲು ಮಾಡಲಿ. ಆದನ್ನು ಬಿಟ್ಟು ಆಯೋಜಕರು ದಂಡವನ್ನು ಏಕೆ ಕಟ್ಟಬೇಕು. ಇದೊಂದು ಅವೈಜ್ಞಾನಿಕ ಕ್ರಮವಾಗಿದೆ ಎಂಬುದು ವರ್ತಕರ ಆಕ್ರೋಶವಾಗಿದೆ.**